ಜೆಎಸ್‌ಎಸ್ ಮಹಾವಿದ್ಯಾಪೀಠ, ಮೈಸೂರು
JSS MAHAVIDYAPEETHA, MYSURU

# ಜೆಎಸ್‌ಎಸ್ ವಾರ್ತಾಪತ್ರ

## ಮಾಸಪತ್ರಿಕೆ

# JSS VARTHAPATHRA

*Monthly Magazine*

ಸಂಪುಟ 7 ಸಂಚಿಕೆ 1 ಜನವರಿ 2022



ಸುತ್ತೂರು ಶ್ರೀಕ್ಷೇತ್ರದಲ್ಲಿ ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ 1062ನೆಯ ಜಯಂತಿ ಮಹೋತ್ಸವದ ಮೆರವಣಿಗೆಗೆ ಪರಮಪೂಜ್ಯ ಜಗದ್ಗುರುಗಳವರ ಸಾನ್ನಿಧ್ಯದಲ್ಲಿ ಚಾಲನೆ ನೀಡಲಾಯಿತು. ವಾಟಾಳು, ಹೊಸಮಠ, ಹಲವಾರ, ಕುದೇರು, ಮಾದಹಳ್ಳಿ, ಬರಡನಪುರ, ಗೌಡಹಳ್ಳಿ ಮಠಗಳ ಶ್ರೀಗಳು, ಜನಪ್ರತಿನಿಧಿಗಳು, ಜೆಎಸ್‌ಎಸ್ ಮಹಾವಿದ್ಯಾಪೀಠದ ಅಧಿಕಾರಿಗಳು ಹಾಗೂ ಇತರರಿದ್ದಾರೆ (1 ಜನವರಿ 2022)



ಸುತ್ತೂರು ಶ್ರೀಕ್ಷೇತ್ರದಲ್ಲಿ ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳ 1062ನೆಯ ಜಯಂತಿ ಮಹೋತ್ಸವದ ಸಂದರ್ಭದಲ್ಲಿ ಪರಮಪೂಜ್ಯ ಜಗದ್ಗುರುಗಳವರ ಸಾನ್ನಿಧ್ಯದಲ್ಲಿ ಸಿದ್ಧಾಂತಿ ಡಾ. ಕೆ.ಜಿ. ಪುಟ್ಟಹೊನ್ನಯ್ಯನವರು ಸಿದ್ಧಪಡಿಸಿ ಪ್ರಕಟಿಸಿರುವ ಶ್ರೀ ಶುಭಕೃತು ನಾಮ ಸಂವತ್ಸರದ ಶ್ರೀ ಸುತ್ತೂರು ಶಿವರಾತ್ರೀಶ್ವರ ಪಂಚಾಂಗವನ್ನು ಬಿಡುಗಡೆಗೊಳಿಸಲಾಯಿತು. ಚಿತ್ರದಲ್ಲಿ ಶ್ರೀ ಟಿ.ಎಸ್. ಲೋಕೇಶ್, ಶ್ರೀ ನಂ ಸಿದ್ದಪ್ಪ, ಶ್ರೀ ಎಸ್.ಪಿ. ಮಂಜುನಾಥ್, ಶ್ರೀ ಎಸ್. ಶಿವಕುಮಾರಸ್ವಾಮಿ, ಶ್ರೀ ಜಿ.ಎನ್. ನಂಜುಂಡಸ್ವಾಮಿ, ವಾಟಾಳು ಶ್ರೀಗಳು, ಪಂಚಾಂಗ ಕರ್ತೃಗಳಾದ ಡಾ. ಕೆ.ಜಿ. ಪುಟ್ಟಹೊನ್ನಯ್ಯ, ಶ್ರೀಮತಿ ಪರಿಮಳ ನಾಗಪ್ಪ, ಶ್ರೀ ಎ.ಆರ್. ಕೃಷ್ಣಮೂರ್ತಿ, ಶ್ರೀ ಎಸ್. ಮಹದೇವಯ್ಯ ಹಾಗೂ ಕಾನ್ಯ ಶಿವಮೂರ್ತಿಯವರಿದ್ದಾರೆ (1 ಜನವರಿ 2022)



ಮೈಸೂರಿನ ಜೆಎಸ್‌ಎಸ್ ಮಹಿಳಾ ಕಾಲೇಜಿನ ನವಜ್ಯೋತಿ ಸಭಾಂಗಣದಲ್ಲಿ ಜೆಎಸ್‌ಎಸ್ ಸಂಗೀತ ಸಭಾ ಟ್ರಸ್ಟ್ ವತಿಯಿಂದ ಪರಮಪೂಜ್ಯ ಜಗದ್ಗುರುಗಳವರ ದಿವ್ಯಸಾನ್ನಿಧ್ಯದಲ್ಲಿ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಸಂಸ್ಮರಣ 28ನೇ ಸಂಗೀತ ಸಮ್ಮೇಳನವನ್ನು ಜ್ಯೋತಿ ಬೆಳಗಿಸಿ ಉದ್ಘಾಟಿಸಲಾಯಿತು. ವಿದ್ವಾನ್ ಮೈಸೂರು ಎಂ. ಮಂಜುನಾಥ್, ಡಾ. ಆರ್.ಕೆ. ಪದ್ಮನಾಭ, ಪ್ರೊ. ಜಿ. ಹೇಮಂತಕುಮಾರ್, ವಿದ್ವಾನ್ ಮೈಸೂರು ಎಂ. ನಾಗರಾಜರವರುಗಳಿದ್ದಾರೆ (2 ಡಿಸೆಂಬರ್ 2021)

## ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳ 1062ನೆಯ ಜಯಂತಿ

ಸುತ್ತೂರು ಶ್ರೀಕ್ಷೇತ್ರದಲ್ಲಿ ದಿನಾಂಕ 1.1.2022ರಂದು ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳ 1062ನೆಯ ಜಯಂತಿ ಮಹೋತ್ಸವವು ಪರಮಪೂಜ್ಯ ಜಗದ್ಗುರುಗಳವರ ದಿವ್ಯಸಾನ್ನಿಧ್ಯದಲ್ಲಿ ಭಕ್ತಿ ಗೌರವಗಳಿಂದ ನೆರವೇರಿತು.

ಪ್ರಾತಃಕಾಲ ಕರ್ತೃಗದ್ದುಗೆಯಲ್ಲಿ ರುದ್ರಾಭಿಷೇಕ, ಸಹಸ್ರನಾಮಾವಳಿ, ಅಷ್ಟೋತ್ತರ, ವಿಶೇಷ ಪೂಜೆಗಳು ಹಾಗೂ ಆದಿಜಗದ್ಗುರುಗಳವರ ರಜತ ಉತ್ಸವ ಮೂರ್ತಿಗೆ ಷೋಡಶೋಪಚಾರ ಪೂಜೆಗಳು ನೆರವೇರಿದವು. ಆದಿಜಗದ್ಗುರುಗಳ ಉತ್ಸವ ಮೂರ್ತಿಯ ಮೆರವಣಿಗೆಯು ಶ್ರೀಮಠದ ಬಿರುದು ಬಾವಲಿಗಳು, ಮಂಗಳವಾದ್ಯ, ಎನ್‌ಸಿಸಿ ಹಾಗೂ ಜನಪದ ಕಲಾ ತಂಡಗಳೊಂದಿಗೆ ಸುತ್ತೂರಿನ ಪ್ರಮುಖ ಬೀದಿಗಳಲ್ಲಿ ನೆರವೇರಿತು. ಜೆಎಸ್‌ಎಸ್ ಲಲಿತಾ ಕಲಾ ವೃಂದ ಹಾಗೂ ಮೈಸೂರಿನ ನಿನಾದ ತಂಡದವರಿಂದ ಭಕ್ತಿಗೀತೆ, ಸುಗಮಸಂಗೀತ, ಮಾಜಿ ಶಾಸಕರಾದ ಶ್ರೀ ಬಾಲರಾಜ್ ಹಾಗೂ ಚಾಮರಾಜನಗರದ ಕದಳಿ ವೇದಿಕೆ ಸದಸ್ಯರು ವಚನಗಾಯನ ಕಾರ್ಯಕ್ರಮ ನಡೆಸಿಕೊಟ್ಟರು.

ಇದೇ ಸಂದರ್ಭದಲ್ಲಿ ಸಿದ್ಧಾಂತಿ ಡಾ. ಕೆ.ಜಿ. ಪುಟ್ಟಹೊನ್ನಯ್ಯನವರು ಸಿದ್ಧಪಡಿಸಿ, ಭಾರತೀಯ ಜ್ಯೋತಿರ್ವಿಜ್ಞಾನ ಸಂಶೋಧನಾ ಕೇಂದ್ರದಿಂದ ಪ್ರಕಟಿಸಿರುವ ಶ್ರೀ ಶಾಲಿವಾಹನ ಶಕೆ 1944ನೆಯ ಶ್ರೀ ಶುಭಕೃತು ನಾಮ ಸಂವತ್ಸರದ ಶ್ರೀ ಸುತ್ತೂರು ಶಿವರಾತ್ರೀಶ್ವರ ಪಂಚಾಂಗವನ್ನು ಹಾಗೂ 2022ನೆಯ ವರ್ಷದ ಜೆಎಸ್‌ಎಸ್ ಮಹಾವಿದ್ಯಾಪೀಠದ ಕನ್ನಡ ಹಾಗೂ ಇಂಗ್ಲಿಷ್ ಟೇಬಲ್ ಕ್ಯಾಲೆಂಡರ್‌ಗಳನ್ನು ಬಿಡುಗಡೆಗೊಳಿಸಲಾಯಿತು.

ಸಮಾರಂಭದಲ್ಲಿ ವಾಟಾಳು, ಹೊಸಮಠ, ಕುದೇರು, ಮಾದಹಳ್ಳಿ, ಚಿಕ್ಕತುಪ್ಪೂರು, ಕುಂದೂರು, ಆಲಮಟ್ಟಿ, ಬರಡನಪುರ, ಗೌಡಹಳ್ಳಿ, ಮುಡುಕನಪುರ, ಮಾದಳ್ಳಿ, ಹರವೆ, ದಂಡಿಕೆರೆ, ಹುಲ್ಲಹಳ್ಳಿ, ಮುಡಿಗುಂಡ, ಕುಂದೂರು, ನೀಲಕಂಠಸ್ವಾಮಿಮಠ, ಚುಂಚನಹಳ್ಳಿ ಹಾಗೂ ನವಿಲೂರು ಮಠಗಳ ಶ್ರೀಗಳು ಸೇರಿದಂತೆ ನೂರಕ್ಕೂ ಹೆಚ್ಚು ಮಠಾಧೀಶರು ಹಾಗೂ ಹರಗುರು ಚರಮೂರ್ತಿಗಳು, ಶಾಸಕರಾದ ಶ್ರೀ ಸಿ.ಎಸ್. ನಿರಂಜನಮೂರ್ತಿ, ಶ್ರೀ ಎನ್. ಮಹೇಶ್, ಶ್ರೀ ಮರಿತಿಬ್ಬೇಗೌಡ, ಮಾಜಿ ಸಂಸದರಾದ ಶ್ರೀ ಆರ್. ಧ್ರುವನಾರಾಯಣ್, ಮಾಜಿ ಶಾಸಕರುಗಳಾದ ಶ್ರೀ ಜಿ.ಎನ್. ನಂಜುಂಡಸ್ವಾಮಿ, ಶ್ರೀ ಎಂ.ಕೆ. ಸೋಮಶೇಖರ್, ಶ್ರೀ ಎ.ಆರ್. ಕೃಷ್ಣಮೂರ್ತಿ, ಶ್ರೀಮತಿ ಪರಿಮಳ ನಾಗಪ್ಪ, ಶ್ರೀ ಎಸ್. ಬಾಲರಾಜ್, ಶ್ರೀ ಕಳಲೆ ಕೇಶವಮೂರ್ತಿ ಭಾಗವಹಿಸಿದ್ದರು. ಮೈಸೂರು, ಬೆಂಗಳೂರು, ಚಾಮರಾಜನಗರ, ಮಂಡ್ಯ, ಹಾಸನ, ರಾಮನಗರ, ಕೊಡಗು, ಶಿವಮೊಗ್ಗ ಮೊದಲಾದ ಜಿಲ್ಲೆಗಳಿಂದ ಆಗಮಿಸಿದ್ದ ಭಕ್ತಾದಿಗಳು ಹಾಗೂ ಸಾರ್ವಜನಿಕರು ಪಾಲ್ಗೊಂಡಿದ್ದರು.

## ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 36ನೇ ಪುಣ್ಯಾರಾಧನೆ

ಸುತ್ತೂರು ಶ್ರೀಕ್ಷೇತ್ರದಲ್ಲಿ ದಿನಾಂಕ 8.12.2021ರಂದು ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 36ನೆಯ ಪುಣ್ಯ ಸಂಸ್ಮರಣೆಯ ಅಂಗವಾಗಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯಸಾನ್ನಿಧ್ಯದಲ್ಲಿ ಗದ್ದುಗೆಯಲ್ಲಿ ರುದ್ರಾಭಿಷೇಕ ಹಾಗೂ ವಿಶೇಷ ಪೂಜಾ ಕಾರ್ಯಕ್ರಮಗಳು ಜರುಗಿದವು.

ಇದೇ ಸಂದರ್ಭದಲ್ಲಿ 2022 ಜನವರಿ–ಫೆಬ್ರವರಿಯಲ್ಲಿ ಜರುಗಲಿರುವ ಜಾತ್ರಾ ಮಹೋತ್ಸವದ ಪೂರ್ವಭಾವಿ ಸಭೆ ನಡೆಯಿತು. ಕರೋನಾ ವೈರಾಣು ರೂಪಾಂತರ ಗೊಂಡು ಓಮಿಕ್ರಾನ್ ವೈರಾಣುಗಳಾಗಿ ಮತ್ತೆ ಕಂಡುಬರುತ್ತಿರುವುದರಿಂದ ಸರ್ಕಾರವು ಆಗಿಂದಾಗ್ಗೆ ಎಚ್ಚರಿಕೆಯ ಸೂಚನೆಗಳನ್ನು ನೀಡುತ್ತಿರುವುದರಿಂದ ಕಳೆದ ವರ್ಷದಂತೆಯೇ ಜಾತ್ರಾ ಮಹೋತ್ಸವವನ್ನು ಸರಳ ರೀತಿಯಲ್ಲಿ ಆಚರಿಸಲು ತೀರ್ಮಾನಿಸಲಾಯಿತು. ಶ್ರೀಮಠ ಮತ್ತು ಜೆಎಸ್‌ಎಸ್ ಮಹಾವಿದ್ಯಾಪೀಠದ 2022ನೇ ವರ್ಷದ ಗೋಡೆ ಹಾಗೂ ಪ್ಯಾಕೆಟ್ ಕ್ಯಾಲೆಂಡರ್‌ಗಳನ್ನು ಇದೇ ಸಂದರ್ಭದಲ್ಲಿ ಬಿಡುಗಡೆ ಮಾಡಲಾಯಿತು.

ವಾಟಾಳು, ಹೊಸಮಠ, ಪಡುಗೂರು, ಬೆಟ್ಟದಪುರ, ನೀಲಕಂಠಸ್ವಾಮಿಮಠ, ಕುಂದೂರು ಮಠ, ಮಾದಹಳ್ಳಿ, ಬರಡನಪುರ, ಚಿಕ್ಕತುಪ್ಪೂರು, ಹುಲಿಯೂರುದುರ್ಗ, ದಂಡಿಕೆರೆ, ಚುಂಚನಹಳ್ಳಿ, ಕುದೇರು, ರಾಗಿಬೊಮ್ಮನಹಳ್ಳಿ, ರಾಮಾಪುರ, ಶಿರಮಹಳ್ಳಿ, ಮೊದಲಾದ ಮಠಗಳ ಮಠಾಧೀಶರು, ಗಣ್ಯರು ಹಾಗೂ ಭಕ್ತಾದಿಗಳು ಪಾಲ್ಗೊಂಡಿದ್ದರು.

## ಪ್ರತಿ ಜಿಲ್ಲೆಯಲ್ಲಿಯೂ ವೈದ್ಯಕೀಯ ಕಾಲೇಜುಗಳು ಸ್ಥಾಪನೆಯಾಗಬೇಕು

ರಾಜ್ಯದ ಪ್ರತಿ ಜಿಲ್ಲೆಯಲ್ಲಿಯೂ ವೈದ್ಯಕೀಯ ಕಾಲೇಜುಗಳು ಸ್ಥಾಪನೆಯಾಗಬೇಕು ಎಂದು ಧರ್ಮಸ್ಥಳದ ಧರ್ಮಾಧಿಕಾರಿಗಳಾದ ಡಾ. ಡಿ. ವೀರೇಂದ್ರ ಹೆಗ್ಗಡೆಯವರು ಹೇಳಿದರು.

ಮೈಸೂರಿನ ಸುತ್ತೂರು ಶ್ರೀಮಠದಲ್ಲಿ ಕುಲಾಧಿಪತಿಗಳಾದ ಪರಮಪೂಜ್ಯ ಜಗದ್ಗುರುಗಳವರ ದಿವ್ಯಸಾನ್ನಿಧ್ಯದಲ್ಲಿ ದಿನಾಂಕ 17.12.2021ರಂದು ನಡೆದ **ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿಯ** 12ನೇ ಘಟಿಕೋತ್ಸವದಲ್ಲಿ ಅವರು ಮಾತನಾಡುತ್ತಾ, ಕೊರೋನಾ ಸಮಯದಲ್ಲಿ ಕೆಲವು ಆಸ್ಪತ್ರೆಗಳಲ್ಲಿ ಹೆಚ್ಚಿನ ಬಿಲ್ ಪಡೆದ ಪರಿಣಾಮ ಸಾಮಾನ್ಯರು ಆಸ್ಪತ್ರೆಗಳಿಗೆ ಹೋಗಲು ಭಯಪಟ್ಟರು. ಆದರೆ ಜೆಎಸ್‌ಎಸ್ ಮತ್ತು ಎಸ್‌ಡಿಎಂನಂತಹ ಕೆಲವು ಆಸ್ಪತ್ರೆಗಳಲ್ಲಿ ಮಾನವೀಯತೆ ಮತ್ತು ಸಾಮಾಜಿಕ ಕಾಳಜಿಯನ್ನು ಮರೆಯದೆ ಕನಿಷ್ಟ ಶುಲ್ಕ ಪಡೆದು ಸೋಂಕಿತರಲ್ಲಿ ಆತ್ಮವಿಶ್ವಾಸ ತುಂಬುವ ಕಾರ್ಯ ಮಾಡಲಾಯಿತು. ಐಷಾರಾಮೀ ಜೀವನದ ಕನಸು ಹೊತ್ತು ವೈದ್ಯ ವೃತ್ತಿಗೆ ಬರಬಾರದು. ಸೇವೆ ಮಾಡುವ ಬಯಕೆಯಿಂದ ಈ ವೃತ್ತಿಗೆ ಬರಬೇಕು. ದೈವೀಕ ಹೃದಯದ ಸೇವೆ ಸಲ್ಲಿಸಬೇಕು. ವೈದ್ಯರಾದವರು ಮಾನವೀಯತೆಯನ್ನು ಎಂದಿಗೂ ಮರೆಯಬಾರದು ಎಂದು ತಿಳಿಸಿದರು.

ಘಟಿಕೋತ್ಸವದಲ್ಲಿ ಒಟ್ಟು 2138 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು. 61 ವಿದ್ಯಾರ್ಥಿಗಳಿಗೆ ಅತ್ಯುತ್ತಮ ಶೈಕ್ಷಣಿಕ ಸಾಧನೆಗಾಗಿ 83 ಚಿನ್ನದ ಪದಕಗಳು ಮತ್ತು ಪ್ರಶಸ್ತಿಗಳನ್ನು ವಿತರಿಸಲಾಯಿತು. 47 ಅಭ್ಯರ್ಥಿಗಳು ಪಿಎಚ್‌ಡಿ ಸಂಶೋಧನಾ ಪದವಿ ಮತ್ತು 7 ಅಭ್ಯರ್ಥಿಗಳು ವೈದ್ಯಕೀಯ ಸೂಪರ್ ಸ್ಪೆಷಾಲಿಟಿ ಪದವಿಯನ್ನು ಪಡೆದರು.

ಕುಲಪತಿಗಳಾದ ಡಾ. ಸುರೀಂದರ್ ಸಿಂಗ್ ವರದಿ ಮಂಡಿಸಿ, ಸ್ವಾಗತಿಸಿದರು. ಕುಲಸಚಿವರಾದ ಡಾ. ಬಿ. ಮಂಜುನಾಥ ವಂದಿಸಿದರು. ಕು. ಅರುಣಿಮಾ ಪ್ರಕಾಶ್, ಕು. ಮೇಧಾ ಭಟ್, ಡಾ. ಸಂಗೀತಾ ಅರುಣ್ ಪ್ರಾರ್ಥಿಸಿದರು.

ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿಗಳಾದ ಡಾ. ಸಿ.ಜಿ. ಬೆಟಸೂರಮಠ, ಸಮಕುಲಪತಿಗಳಾದ ಡಾ. ಬಿ. ಸುರೇಶ್, ಪರೀಕ್ಷಾ ನಿಯಂತ್ರಕರಾದ ಡಾ. ಆರ್. ಸುಧೀಂದ್ರ ಭಟ್, ಪ್ರಾಂಶುಪಾಲರಾದ ಡಾ. ಹೆಚ್. ಬಸವನಗೌಡಪ್ಪ, ಆಡಳಿತ ಮಂಡಳಿಯ ಸದಸ್ಯರಾದ ಶ್ರೀ ಎಸ್. ಸತ್ಯಂ, ಡಾ. ಎಸ್. ಸಚ್ಚಿದಾನಂದ, ಡೀನ್‌ರವರು ಹಾಗೂ ಗಣ್ಯರು ಉಪಸ್ಥಿತರಿದ್ದರು.

## ಆರೋಗ್ಯ ಕ್ಷೇತ್ರಕ್ಕೆ ಸುತ್ತೂರು ಶ್ರೀಮಠದ ಕೊಡುಗೆ ಅಪಾರ

ತ್ರಿವಿಧ ದಾಸೋಹದೊಂದಿಗೆ ಆರೋಗ್ಯ ದಾಸೋಹವನ್ನು ಸುತ್ತೂರು ಶ್ರೀಮಠ ನಿರಂತರವಾಗಿ ಮಾಡಿಕೊಂಡು ಬರುತ್ತಿದೆ ಎಂದು ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಸವರಾಜ ಎಸ್. ಬೊಮ್ಮಾಯಿಯವರು ಹೇಳಿದರು.

ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆಯಲ್ಲಿ ನೂತನವಾಗಿ ಸ್ಥಾಪಿಸಿದ ಆಕ್ಸಿಜನ್ ಜನರೇಟರ್ ಮತ್ತು ಲಿಕ್ವಿಡ್ ಮೆಡಿಕಲ್ ಆಕ್ಸಿಜನ್ ಪ್ಲಾಂಟ್‌ಗಳನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ದಿನಾಂಕ 26.12.2021ರಂದು ಉದ್ಘಾಟಿಸಿ ಅವರು ಮಾತನಾಡಿದರು.

ಕೋವಿಡ್ ಸೋಂಕನ್ನು ಸರ್ಕಾರ ಯಶಸ್ವಿಯಾಗಿ ನಿಭಾಯಿಸುತ್ತಿದೆ. ಹೊಸದಾಗಿ ಐಸಿಯು ಮತ್ತು ಆಕ್ಸಿಜನ್ ಪ್ಲಾಂಟ್‌ಗಳನ್ನು ನಿರ್ಮಿಸಲಾಗುತ್ತಿದೆ. ಔಷಧಿಗಳನ್ನು ಸಹ ಸಂಗ್ರಹಿಸಲಾಗಿದೆ. ಈಗಾಗಲೇ ಶೇ 97ರಷ್ಟು ಜನರಿಗೆ ಮೊದಲ ಡೋಸ್ ಲಸಿಕೆಯನ್ನು ಮತ್ತು ಶೇ 79ರಷ್ಟು ಜನರಿಗೆ ಎರಡನೇ ಡೋಸ್ ಲಸಿಕೆಯನ್ನು ನೀಡಲಾಗಿದೆ. ಎಂತಹ ಸಂಕಷ್ಟಗಳು ಬಂದರೂ ಎದುರಿಸಲು ಸರ್ಕಾರ ಸಿದ್ಧವಾಗಿದೆ ಎಂದು ತಿಳಿಸಿದರು.

ಜೆಎಸ್‌ಎಸ್ ಶ್ರವಣ ಮಿತ್ರ ಆ್ಯಪ್ ಬಿಡುಗಡೆಗೊಳಿಸಿದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರಾದ ಡಾ. ಕೆ. ಸುಧಾಕರ್‌ರವರು ಜೆಎಸ್‌ಎಸ್ ಸಂಸ್ಥೆ ಸಂಕಷ್ಟದ ಸಂದರ್ಭದಲ್ಲಿ ಸದಾಕಾಲ ಬೆನ್ನೆಲುಬಾಗಿ ನಿಂತಿದೆ. ಜನರಿಗೆ ಬೇಕಾದ ಆರೈಕೆ ಮತ್ತು ಚಿಕಿತ್ಸೆಯನ್ನು ಅತ್ಯಂತ ಕೈಗೆಟುಕುವ ಹಾಗೆ ನೀಡುತ್ತಿದೆ. ಅದರಲ್ಲಿ ಇಂದು ಬಿಡುಗಡೆಗೊಳಿಸಿರುವ ಆ್ಯಪ್ ಸಹ ಒಂದು. ಇದರಿಂದ ಶ್ರವಣ ದೋಷವನ್ನು ಪತ್ತೆಹಚ್ಚಿ ಸೂಕ್ತ ಚಿಕಿತ್ಸೆಯನ್ನು ಪಡೆದುಕೊಳ್ಳಲು ಅನುವು ಮಾಡಿಕೊಟ್ಟಿದೆ. ಸರ್ಕಾರ ಇಂತಹ ಎಲ್ಲ ಕಾರ್ಯಗಳಿಗೆ ಪ್ರೋತ್ಸಾಹ ನೀಡಲಿದೆ. ಪೂಜ್ಯರ ನೇತೃತ್ವದಲ್ಲಿ ನಡೆಯುತ್ತಿರುವ ಇಂತಹ ಕಾರ್ಯವನ್ನು ಸರ್ಕಾದ ಪರವಾಗಿ ಅಭಿನಂದಿಸುತ್ತೇನೆ. ಕೋವಿಡ್ ನಮಗೆಲ್ಲ ಹೊಸಪಾಠವನ್ನು ಕಲಿಸಿದೆ. ಮೂರನೇ ಅಲೆ ಓಮಿಕ್ರಾನ್ ರೂಪದಲ್ಲಿ ವೇಗವಾಗಿ ಹರಡುತ್ತಿದೆ. ಆದರೆ ಅದರ ತೀವ್ರತೆಯನ್ನು ಇನ್ನೂ ಗುರುತಿಸಲಾಗಿಲ್ಲ. ಹೀಗಾಗಿ ಮುಂಜಾಗ್ರತೆ ಮತ್ತು ಮುನ್ನೆಚ್ಚರಿಕೆಗಳನ್ನು ಎಲ್ಲರೂ ತೆಗೆದುಕೊಳ್ಳಬೇಕು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಶಾಸಕರು ಹಾಗೂ ಮಾಜಿ ಸಚಿವರಾದ ಶ್ರೀ ಎಸ್.ಎ. ರಾಮದಾಸ್‌ರವರು ಅಧ್ಯಕ್ಷತೆ ವಹಿಸಿದ್ದರು. ಸಂಸದರಾದ ಶ್ರೀ ಪ್ರತಾಪಸಿಂಹ, ಶಾಸಕರುಗಳಾದ ಶ್ರೀ ಜಿ.ಟಿ. ದೇವೇಗೌಡ, ಶ್ರೀ ತನ್ವೀರ್ ಸೇಠ್, ಶ್ರೀ ಎಲ್. ನಾಗೇಂದ್ರ, ಮೇಯರ್ ಶ್ರೀಮತಿ ಸುನಂದಾ ಪಾಲನೇತ್ರ, ಕಾರ್ಯನಿರ್ವಾಹಕ ಕಾರ್ಯದರ್ಶಿಗಳಾದ ಡಾ. ಸಿ.ಜಿ. ಬೆಟಸೂರಮಠ, ಕಾರ್ಯದರ್ಶಿಗಳಾದ ಶ್ರೀ ಎಸ್.ಪಿ. ಮಂಜುನಾಥ್, ಶ್ರೀ ಎಸ್. ಶಿವಕುಮಾರಸ್ವಾಮಿ, ಕುಲಪತಿಗಳಾದ ಡಾ. ಸುರಿಂದರ್ ಸಿಂಗ್, ಕುಲಸಚಿವರಾದ ಡಾ. ಬಿ. ಮಂಜುನಾಥ್, ಪ್ರಾಂಶುಪಾಲರಾದ ಡಾ. ಹೆಚ್. ಬಸವನಗೌಡಪ್ಪ ಉಪಸ್ಥಿತರಿದ್ದರು. ಜೆಎಸ್‌ಎಸ್ ಆಸ್ಪತ್ರೆಯ ನಿರ್ದೇಶಕರಾದ ಕರ್ನಲ್ ಡಾ. ಬಿ. ದಯಾನಂದ್‌ರವರು ಸ್ವಾಗತಿಸಿದರು. ಡಾ. ಸೌಮ್ಯ ಪ್ರಾರ್ಥಿಸಿದರು. ಡಾ. ಪಿ. ಶಾಸ್ತ್ರಾರ ಕಾರ್ಯಕ್ರಮ ನಿರೂಪಿಸಿದರು.

## ಕಲೆ, ಸಂಸ್ಕೃತಿ, ಸಾಹಿತ್ಯದ ಬೆಳವಣಿಗೆಗೆ ಜೆಎಸ್‌ಎಸ್ ಸಂಸ್ಥೆಯ ಕೊಡುಗೆ ಅಪಾರ

ಕಲೆ, ಸಂಸ್ಕೃತಿ, ಸಾಹಿತ್ಯದ ಬೆಳವಣಿಗೆಯಲ್ಲಿ ಜೆಎಸ್‌ಎಸ್ ಸಂಸ್ಥೆಯ ಕೊಡುಗೆ ಅಪಾರ ಎಂದು ಸಂಗೀತ ವಿದ್ಯಾನಿಧಿ ಡಾ. ಆರ್.ಕೆ. ಪದ್ಮನಾಭರವರು ಹೇಳಿದರು.

**ಮೈಸೂರಿನ ಜೆಎಸ್‌ಎಸ್ ಮಹಿಳಾ ಕಾಲೇಜಿನ** ನವಜ್ಯೋತಿ ಸಭಾಂಗಣದಲ್ಲಿ ಜೆಎಸ್‌ಎಸ್ ಸಂಗೀತ ಸಭಾ ಟ್ರಸ್ಟ್ ವತಿಯಿಂದ ಪರಮಪೂಜ್ಯ ಜಗದ್ಗುರುಗಳವರ ದಿವ್ಯಸಾನ್ನಿಧ್ಯದಲ್ಲಿ ದಿನಾಂಕ 2.12.2021ರಂದು ನಡೆದ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಸಂಸ್ಮರಣ ಸಂಗೀತೋತ್ಸವದಲ್ಲಿ ಮಾತನಾಡುತ್ತಾ ಕರ್ನಾಟಕ ಶಾಸ್ತ್ರೀಯ ಸಂಗೀತ ಹಿಂದಿನಿಂದಲೂ ತನ್ನ ಮೂಲತತ್ತ್ವಗಳನ್ನು ಬಿಡದೆ ಒಂದೇ ರೀತಿಯಲ್ಲಿ ನಡೆದುಕೊಂಡು ಬಂದಿದೆ. ಇದಕ್ಕೆ ಸುತ್ತೂರು ಮಠವು ಸಾಕಷ್ಟು ಪ್ರೋತ್ಸಾಹ ನೀಡಿದೆ. ಸಾಮಾಜಿಕ ಸಾಮರಸ್ಯವನ್ನು ಕಾಪಾಡುವ ನಿಟ್ಟಿನಲ್ಲಿ ಶ್ರೀಮಠ ಈ ರೀತಿಯ ಅನೇಕ ಕಾರ್ಯಕ್ರಮಗಳನ್ನು ಏರ್ಪಡಿಸಿಕೊಂಡು ಬರುತ್ತಿದೆ ಎಂದರು.

ಕುಲಪತಿಗಳಾದ ಪ್ರೊ. ಜಿ. ಹೇಮಂತಕುಮಾರರವರು ಸಂಗೀತ ಪ್ರತಿಯೊಬ್ಬರ ಜೀವನದಲ್ಲೂ ಒಂದು ವಿಭಿನ್ನ ರೀತಿಯ ಪ್ರಭಾವವನ್ನು ಬೀರುತ್ತದೆ. ಸಂಗೀತ ಮನಸ್ಸನ್ನು ಸುಸ್ಥಿತಿಯಲ್ಲಿಡುವುದರ ಜೊತೆಗೆ ಮಾನಸಿಕ ಖಿನ್ನತೆಯನ್ನು

ದೂರ ಮಾಡುತ್ತದೆ. ಮಾನಸಿಕ ಒತ್ತಡ ನಿವಾರಣೆಗೆ ಸಂಗೀತವೇ ಚಿಕಿತ್ಸೆ. ಸಮಾಜದಲ್ಲಿ ಸ್ವಾಸ್ಥ್ಯ ನೆಲೆಸಲು ಸಂಗೀತದ ಪಾತ್ರ ಬಹಳ ಮಹತ್ತರವಾದುದು ಎಂದು ತಿಳಿಸಿದರು.

ಕಾರ್ಯಕ್ರಮದ ನಂತರ ಡಾ. ಆರ್.ಕೆ. ಪದ್ಮನಾಭರವರು ಕರ್ನಾಟಕ ಶಾಸ್ತ್ರೀಯ ಸಂಗೀತ ಗಾಯನ ಪ್ರಸ್ತುತಪಡಿಸಿದರು. ವಿದ್ವಾನ್ ಮೈಸೂರು ಎಂ. ನಾಗರಾಜ್‌ರವರು ಅಧ್ಯಕ್ಷತೆ ವಹಿಸಿದ್ದರು. ವಿದ್ವಾನ್ ಮೈಸೂರು ಎಂ. ಮಂಜುನಾಥ್ ಸ್ವಾಗತಿಸಿದರು. ಕು. ಲಲಿತ ಹಾಗೂ ಕು. ಅಶ್ವಿನಿ ಪ್ರಾರ್ಥಿಸಿದರು. ಪ್ರೊ. ಕೆ. ರಾಮಮೂರ್ತಿರಾವ್ ವಂದಿಸಿದರು. ಡಾ. ಪೂರ್ಣಿಮ ಕೃಷ್ಣಮೂರ್ತಿ ಕಾರ್ಯಕ್ರಮ ನಿರೂಪಿಸಿದರು.

## ಸಂಸ್ಕೃತಿ –2021: ಕೈಮಗ್ಗ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟ ಮೇಳ



ಮೈಸೂರಿನ ಜೆಎಸ್‌ಎಸ್ ಅರ್ಬನ್ ಹಾತ್‌ನಲ್ಲಿ ಡಿಸೆಂಬರ್ 18ರಿಂದ ಜನವರಿ 2ರವರೆಗೆ ಜವಳಿ ಅಭಿವೃದ್ಧಿ ಆಯುಕ್ತರು, ಕೈಮಗ್ಗ ಜವಳಿ ಮಂತ್ರಾಲಯ, ನವದೆಹಲಿ ಇವರ ಸಹಯೋಗದೊಂದಿಗೆ ಜವಳಿ ಅಭಿವೃದ್ಧಿ ಆಯುಕ್ತರು ಹಾಗೂ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇಲಾಖೆ, ಬೆಂಗಳೂರು, ಕರ್ನಾಟಕ ಸರ್ಕಾರ ಮತ್ತು ಕರ್ನಾಟಕ ರಾಜ್ಯ ಸಹಕಾರಿ ಕೈಮಗ್ಗ ನೇಕಾರರ ಮಹಾಮಂಡಳಿ ನಿಯಮಿತ ಇವರುಗಳ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಂಡಿದ್ದ ವಿಶೇಷ ಕೈಮಗ್ಗ ಮೇಳ ಸಂಸ್ಕೃತಿ –2021 ಕೈಮಗ್ಗ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟ ಮೇಳವನ್ನು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಶ್ರೀ ಹೆಚ್.ವಿ. ರಾಜೀವ್‌ರವರು ಜ್ಯೋತಿ ಬೆಳಗಿಸಿ ಉದ್ಘಾಟಿಸಿದರು.

ನೇಕಾರರು ಹಾಗೂ ನೇಕಾರರ ಸಹಕಾರ ಸಂಘಗಳು ತಯಾರು ಮಾಡುತ್ತಿರುವ ಕೈಮಗ್ಗ ಉತ್ಪನ್ನಗಳಿಗೆ ಹೆಚ್ಚು ಮಾರುಕಟ್ಟೆ ಒದಗಿಸುವ ದೃಷ್ಟಿಯಿಂದ ಹಾಗೂ ಕೈಮಗ್ಗ ಉತ್ಪನ್ನಗಳು ನಶಿಸಿ ಹೋಗದಂತೆ ಕಾಪಾಡಿಕೊಂಡು ಹೋಗಲು ಸರ್ಕಾರ ಈ ಮೇಳವನ್ನು ಆಯೋಜಿಸುತ್ತಿರುವುದರ ಮುಖ್ಯ ಉದ್ದೇಶವಾಗಿದೆ. ವೃತ್ತಿಯನ್ನು ಅವಲಂಬಿಸಿ ಜೀವನ ನಿರ್ವಹಣೆ ಮಾಡುತ್ತಿರುವ ನೇಕಾರರ ಕುಟುಂಬಗಳನ್ನು ಉತ್ತೇಜಿಸಿ ಒಂದೇ ಸೂರಿನಡಿ ಮಾರುಕಟ್ಟೆಯನ್ನು ಕಲ್ಪಿಸಿ ಕೈಮಗ್ಗ ಉತ್ಪನ್ನಗಳ ಬಗ್ಗೆ ಅರಿವು ಮೂಡಿಸಿ ಉತ್ಪನ್ನಗಳನ್ನು ಬಳಸಲು ಒಂದು ಸುವರ್ಣ ಅವಕಾಶವನ್ನು ಕಲ್ಪಿಸಿಕೊಡಲಾಗುತ್ತಿದೆ. ವಿಶೇಷ ಕೈಮಗ್ಗ ಮೇಳದಲ್ಲಿ ಸುಮಾರು 60ಕ್ಕೂ ಹೆಚ್ಚು ನೇಕಾರರ ಸಹಕಾರ ಸಂಘಗಳು ಭಾಗವಹಿಸಿದ್ದವು. ಉತ್ತರ ಭಾರತದ ಮಧ್ಯಪ್ರದೇಶ, ಉತ್ತರಪ್ರದೇಶ ಮತ್ತು ದಕ್ಷಿಣ ಭಾರತದ ತಮಿಳುನಾಡು, ಆಂಧ್ರಪ್ರದೇಶ ಹಾಗೂ ಕರ್ನಾಟಕದ ವಿವಿಧ ಜಿಲ್ಲೆಗಳಾದ ಮೈಸೂರು, ಚಾಮರಾಜನಗರ, ಮಂಡ್ಯ, ರಾಮನಗರ. ಬೆಂಗಳೂರು ನಗರ, ಬೆಂಗಳೂರು

ಗ್ರಾಮಾಂತರ, ತುಮಕೂರು, ಶಿವಮೊಗ್ಗ, ಚಿತ್ರದುರ್ಗ, ಗದಗ, ಬಾಗಲಕೋಟೆ, ಗುಲ್ಬರ್ಗ ಮತ್ತು ಇಳಕಲ್ ಪ್ರದೇಶದ ಕೈಮಗ್ಗ ನೇಕಾರ ಸಹಕಾರಿ ಸಂಘಗಳಲ್ಲಿ ಕೈಮಗ್ಗ ನೇಕಾರರು ತಯಾರಿಸಿದ ರೇಷ್ಮೆ, ಹತ್ತಿ ಮತ್ತು ಉಣ್ಣೆ ಹಾಗೂ ವಿವಿಧ ಮಿಶ್ರಿತ ನೂಲುಗಳಿಂದ ತಯಾರಿಸಲಾದ ಕೈಮಗ್ಗ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟವನ್ನು ಏರ್ಪಡಿಸಲಾಗಿತ್ತು. ಕೈಮಗ್ಗ ನೇಕಾರ ಸಹಕಾರ ಸಂಘಗಳಿಂದ ಉತ್ಪಾದಿಸಿದ ಉತ್ಪನ್ನಗಳು 20% ರಿಯಾಯಿತಿ ದರದಲ್ಲಿ ನೇರವಾಗಿ ಗ್ರಾಹಕರಿಗೆ ಲಭ್ಯವಿದ್ದವು. ಮೇಳದಲ್ಲಿ ರೇಷ್ಮೆ ಸೀರೆ , ಮೊಳಕಾಲ್ಮೂರು ಸೀರೆ, ಇಳಕಲ್ ಸೀರೆ, ಕಸೂತಿ ಸೀರೆ, ತಮಿಳುನಾಡಿನ ಕಾಂಜೀವರಮ್ ಸೀರೆ, ಬಿಹಾರದ ತಷರ್ ಸೀರೆ, ಕಾಂತ ಸೀರೆ, ಬಲಚುರಿ ಸೀರೆ, ಬುಟಿಕ್ ಸೀರೆ, ಪಶ್ಚಿಮ ಬಂಗಾಳದ ಬೆಂಗಾಲಿ ಕಾಟನ್ ಸೀರೆ, ಉತ್ತರಪ್ರದೇಶದ ಬನಾರಸ್ ಸೀರೆ, ಚಿಕನ್ ಎಂಬ್ರಾಯ್ಡರಿ ಸೀರೆ, ಮಧ್ಯಪ್ರದೇಶದ ಚಂದೇರಿ, ಮಹೇಶ್ವರಿ ಸೀರೆ, ಒರಿಸ್ಸಾ ರಾಜ್ಯದ ಸಂಬಲ್ಪುರಿ ಸೀರೆ, ಇಕ್ಕತ್, ಬೊಂಕಾಯಿ ಸೀರೆ, ಕಾಶ್ಮೀರ ರಾಜ್ಯದ ಪಶ್ಮಿನಾ ಶಾಲ್, ಆಂಧ್ರಪ್ರದೇಶದ ಗೊಡ್ವಾಲ್ ರೇಷ್ಮೆ ಸೀರೆ, ಕಲ್ಮಕಾರಿ ಸೀರೆ, ಪೊಚಂಪಲ್ಲಿ ಸೀರೆಗಳು ಮತ್ತು ಮಧುರೈ ಟೈ ಅಂಡ್ ಡೈ, ಗುಜರಾತ್ ರಾಜ್ಯದ ಪಟೋಲ ರೇಷ್ಮೆ ಸೀರೆಗಳು ಇತರೆ ಎಲ್ಲಾ ರಾಜ್ಯದ ರೇಷ್ಮೆ ಹಾಗೂ ಕಾಟನ್ ಸೀರೆಗಳು, ಡ್ರೆಸ್ ಮೆಟೀರಿಯಲ್ಗಳು, ಕಸೂತಿ ವಸ್ತುಗಳು, ಟವಲ್ಗಳು, ಮೇಲು ಹಾಸು ಮತ್ತು ಹೊದಿಕೆಗಳು, ನೆಲಹಾಸು ಮತ್ತು ಇತರೆ ಕೈಮಗ್ಗ ಉತ್ಪನ್ನಗಳು ಒಂದೇ ಸೂರಿನಡಿ ಪ್ರದರ್ಶನಗೊಂಡವು.

ಕಾರ್ಯಕ್ರಮದಲ್ಲಿ ಕೈಮಗ್ಗ ಮತ್ತು ಜವಳಿ ಇಲಾಖೆಯ ಉಪನಿರ್ದೇಶಕರಾದ ಶ್ರೀ ಲಕ್ಷ್ಮಣ ತಳವಾರ, ಕಾರ್ಯನಿರ್ವಾಹಕ ಕಾರ್ಯದರ್ಶಿಗಳಾದ ಡಾ. ಸಿ.ಜಿ. ಬೆಟಸೂರಮಠ, ತಾಂತ್ರಿಕ ಶಿಕ್ಷಣ ವಿಭಾಗದ ಜಂಟಿ ನಿರ್ದೇಶಕರಾದ ಡಾ. ಎಚ್.ಆರ್. ಮಹದೇವಸ್ವಾಮಿ, ಕಾರ್ಯಕ್ರಮ ಸಂಯೋಜಕರಾದ ಶ್ರೀ ರಾಕೇಶ್ ರೈ, ಶ್ರೀ ಶಿವನಂಜಸ್ವಾಮಿ ಮತ್ತಿತರರು ಉಪಸ್ಥಿತರಿದ್ದರು.

## ಜ್ಞಾನವಾರಿಧಿ


ಮೈಸೂರಿನ ಜೆಎಸ್‌ಎಸ್ ಮಹಾವಿದ್ಯಾಪೀಠದ ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿಯ ವತಿಯಿಂದ ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ದಿವ್ಯಸಾನ್ನಿಧ್ಯದಲ್ಲಿ ಪ್ರತಿ ಸೋಮವಾರ ನಡೆಯುವ ಜ್ಞಾನವಾರಿಧಿ ಉಪನ್ಯಾಸದಲ್ಲಿ ಕಲೆ, ಸಾಹಿತ್ಯ, ಸಂಸ್ಕೃತಿ, ಶಿಕ್ಷಣ, ವಿಜ್ಞಾನ, ತಂತ್ರಜ್ಞಾನ, ಧರ್ಮ, ಅಧ್ಯಾತ್ಮ, ಯೋಗ, ಆರೋಗ್ಯ, ಜೀವನಶೈಲಿ ಮುಂತಾದ ವಿಷಯಗಳು ಮತ್ತು ಪ್ರಚಲಿತ ವಿದ್ಯಮಾನಗಳನ್ನು ಕುರಿತು ದೇಶ ಮತ್ತು ವಿದೇಶದ ವಿವಿಧ ಸಂಪನ್ಮೂಲ ವ್ಯಕ್ತಿಗಳಿಂದ ಉಪನ್ಯಾಸಗಳನ್ನು ಆಯೋಜಿಸಲಾಗುತ್ತಿದೆ. ಆನ್‌ಲೈನ್ ಮೂಲಕ ನಡೆಯುವ ಈ ಉಪನ್ಯಾಸ ಕಾರ್ಯಕ್ರಮವು ಸಾಕಷ್ಟು ಜನಪ್ರಿಯಗೊಂಡಿದೆ. ಉಪನ್ಯಾಸದ ನಂತರ ವೀಕ್ಷಕರ ಆಯ್ದ ಪ್ರಶ್ನೆಗಳಿಗೆ ಉತ್ತರಿಸಲಾಗುವುದು.

ಆನ್‌ಲೈನ್ ಮೂಲಕ ನಡೆಯುವ ಕಾರ್ಯಕ್ರಮದಲ್ಲಿ ಆಧ್ಯಾತ್ಮಿಕ ಜಿಜ್ಞಾಸುಗಳು, ಸಾರ್ವಜನಿಕರು ಭಾಗವಹಿಸುತ್ತಿದ್ದಾರೆ.

### ಶರಣರ ಆದರ್ಶ ಪಾಲನೆಯಿಂದ ಒತ್ತಡ ಮುಕ್ತ ಜೀವನ ಸಾಧ್ಯ

ಶರಣರ ಆದರ್ಶ ಪಾಲನೆಯಿಂದ ಒತ್ತಡ ಮುಕ್ತ ಜೀವನ ಸಾಧ್ಯ ಎಂದು ಗದಗ ಕೆವಿಎಸ್‌ಆರ್ ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ಸಿದ್ದು ಯಾಪಲಪರವಿಯವರು ಹೇಳಿದರು.

ದಿನಾಂಕ 6.12.2021ರಂದು ನಡೆದ ಜ್ಞಾನವಾರಿಧಿ–53 ಡಿಜಿಟಲ್ ಸಾಪ್ತಾಹಿಕ ಉಪನ್ಯಾಸ ಕಾರ್ಯಕ್ರಮದಲ್ಲಿ ಒತ್ತಡ ನಿರ್ವಹಣೆಯ ಜೀವನಶೈಲಿ ವಿಷಯ ಕುರಿತು ಉಪನ್ಯಾಸ ನೀಡುತ್ತಾ, ಒತ್ತಡ ಎನ್ನುವುದು ಜಗತ್ತಿನ



ಎಲ್ಲೆಡೆಯೂ ವ್ಯಾಪಿಸಿದೆ. ಹಲವಾರು ಒತ್ತಡಗಳಲ್ಲೇ ಜಗತ್ತು ನರಳುತ್ತಿದೆ. ಬುದ್ಧನ ಕಾಲದ ಧ್ಯಾನ, ಬಸವಣ್ಣನವರ ಕಾಲದ ಜ್ಞಾನ ಮಾರ್ಗಗಳ ಮೂಲಕ ಇದರ ನಿರ್ವಹಣೆ ಸಾಧ್ಯ. ನಮ್ಮ ನಾಡಿನ ಅನೇಕ ಮಹನೀಯರು ಬದುಕು ಹೇಗಿರಬೇಕು ಎಂಬುದನ್ನು ತೋರಿಸಿಕೊಟ್ಟಿದ್ದಾರೆ. ಇದಕ್ಕೆ 12ನೇ ಶತಮಾನದ ಶರಣರ ಜೀವನವೇ ಉದಾಹರಣೆ. ಬದುಕನ್ನು ಹೇಗೆ ಸುಂದರಗೊಳಿಸಿಕೊಳ್ಳಬೇಕು ಎಂಬ ಬಗೆಯನ್ನು ಅವರು ತೋರಿಸಿದರು. ನಿರ್ಭಯ, ನಿರಾಕರಣೆ, ನಿರ್ಲಿಪ್ತತೆ ಎಂಬುದು ಜೀವನದಲ್ಲಿ ಬಹಳ ಮುಖ್ಯ. ನಮಗೆ ನಾವೇ ಒತ್ತಡವನ್ನು ಸೃಷ್ಟಿಸಿಕೊಳ್ಳುತ್ತಿದ್ದೇವೆ. ಒತ್ತಡದ ಮೂಲ ನಮ್ಮ ಮನಃಸ್ಥಿತಿಯನ್ನು ಅವಲಂಬಿಸಿರುತ್ತದೆ. ಆಲೋಚನ ಕ್ರಮ ಮತ್ತು ಭಾವನೆಗಳ ಮೇಲೆ ನಿಯಂತ್ರಣವಿರಬೇಕು. ಬದುಕನ್ನು ಕೇವಲ ವಾಸ್ತವಿಕ ನೆಲೆಯಲ್ಲಿ ನೋಡಬಾರದು. ಆಧ್ಯಾತ್ಮಿಕತೆಯು ಜೀವನದಲ್ಲಿ ಹಲವಾರು ಬದಲಾವಣೆಗಳನ್ನು ತರುತ್ತದೆ. ಅತಿಯಾದ ನಿರೀಕ್ಷೆಗಳು ಮನುಷ್ಯನನ್ನು ಹಾಳು ಮಾಡುತ್ತವೆ. ವರ್ತಮಾನದಲ್ಲಿ ಬದುಕಿದವರು ಮಾತ್ರ ಸುಖಿಯಾಗಿರಬಲ್ಲರು. ಓಲೈಕೆಯ ಭರದಲ್ಲಿ ಜೀವನದ ಪಾರದರ್ಶಕತೆಯನ್ನು ಕಳೆದುಕೊಳ್ಳುತ್ತಿದ್ದೇವೆ. ಮನುಷ್ಯ ಕಾಡಿನಂತೆ ನಿಲ್ಲಬೇಕು. ನದಿಯಂತೆ ಹರಿಯಬೇಕು. ನಿಲ್ಲುವಿಕೆ ಮತ್ತು ಹರಿಯುವಿಕೆ ಬದುಕಿನ ಸಿದ್ಧಾಂತಗಳಾಗಬೇಕು ಎಂದು ತಿಳಿಸಿದರು.

ಕು. ಭಾರತಿ ಹಾಗೂ ಕು. ಭಾನುಮತಿ ಪ್ರಾರ್ಥಿಸಿದರು. ಡಾ. ಅಂಬಿಕಾ ಕಾರ್ಯಕ್ರಮ ನಿರ್ವಹಿಸಿದರು.

## ಕಾವ್ಯಕ್ಕಿಂತಲೂ ಸುಭಾಷಿತ ಮಧುರವಾದುದು




ಭಾಷೆಗಿಂತಲೂ ಕಾವ್ಯ ಮಧುರ, ಕಾವ್ಯಕ್ಕಿಂತಲೂ ಸುಭಾಷಿತ ಬಲು ಮಧುರ ಎಂದು ತುಮಕೂರಿನ ಶ್ರೀ ಹಿರೇಮಠದ ಡಾ. ಶ್ರೀ ಶಿವಾನಂದ ಶಿವಾಚಾರ್ಯ ಸ್ವಾಮಿಗಳು ಹೇಳಿದರು.

ದಿನಾಂಕ 13.12.2021ರಂದು ನಡೆದ ಜ್ಞಾನವಾರಿಧಿ–54 ಡಿಜಿಟಲ್ ಸಾಪ್ತಾಹಿಕ ಉಪನ್ಯಾಸ ಕಾರ್ಯಕ್ರಮದಲ್ಲಿ ಸಂಸ್ಕೃತ ಸುಭಾಷಿತಗಳಲ್ಲಿ ವಿಧಿ–ನಿಷೇಧಗಳು ವಿಷಯ ಕುರಿತು ಉಪನ್ಯಾಸ ನೀಡುತ್ತಾ, ಸುಭಾಷಿತ ಎಂದರೆ ಒಳ್ಳೆಯ ಮಾತು, ಸೂಳ್ನುಡಿ, ಹಿತನುಡಿ, ಕವಿಮಾತು ಎಂದರ್ಥ. ಸುಭಾಷಿತ ಸಂಸ್ಕೃತ ಸಾಹಿತ್ಯದ ಶಿಖರ. ಪ್ರಪಂಚದ ಅತ್ಯಂತ ದಿವ್ಯ ಮತ್ತು ಮಧುರವಾದ ಭಾಷೆಯೆಂದರೆ ಅದು ಸಂಸ್ಕೃತ. ಸುಭಾಷಿತಗಳು ರತ್ನವಿದ್ದಂತೆ. ಸುಭಾಷಿತಗಳನ್ನು ಅಧ್ಯಯನ ಮಾಡಿದವರು ಜ್ಞಾನಿಗಳನ್ನು ತಮ್ಮ ಮಾತುಗಳಿಂದಲೇ ವಶ ಮಾಡಿಕೊಳ್ಳಬಲ್ಲರು. ಸುಭಾಷಿತಗಳ ವ್ಯಾಪ್ತಿ ವಿಶಾಲವಾದದ್ದು. ಅವುಗಳು ವ್ಯಕ್ತಿತ್ವವನ್ನು ರೂಪಿಸುವಲ್ಲಿ ಬಹಳ ಮಹತ್ವದ ಪಾತ್ರವನ್ನು ವಹಿಸುತ್ತವೆ. ಸಂಸ್ಕೃತದಲ್ಲಿ ಸುಭಾಷಿತದ ಕುರಿತು ಸಾಕಷ್ಟು ಗ್ರಂಥಗಳಿವೆ. ಮಗುವಿನಿಂದ ವಯೋವೃದ್ಧರವರೆಗೂ ಸುಭಾಷಿತಗಳು ನೀತಿಪಾಠವನ್ನು ಮಾಡುತ್ತವೆ. ಮಕ್ಕಳಿಗೆ ಸರಿಯಾದ ಕಾಲಘಟ್ಟದಲ್ಲಿ ನೀಡಬೇಕಾದ ಶಿಕ್ಷಣವನ್ನು ನೀಡಬೇಕು. ಸಂಪತ್ತಿಗೆ ದಾನ, ಅಪಹರಣ, ನಾಶ ಎಂಬ ಮೂರು ಗುಣಗಳಿವೆ. ಅದನ್ನು ದಾನ ಮಾಡಬೇಕು, ಇಲ್ಲವೇ ಅನುಭೋಗಿಸಬೇಕು.

ಇವೆರಡನ್ನು ಮಾಡದಿದ್ದರೆ ಅದು ನಾಶವಾಗುತ್ತದೆ. ಸಂಪತನ್ನು ಇಲ್ಲದವರಿಗೆ ವಿನಿಯೋಗಿಸಬೇಕು. ಮನುಷ್ಯ ಒಳ್ಳೆಯ ಕೆಲಸಗಳನ್ನು ಮಾಡಲು ವಿಳಂಬ ಮಾಡಬಾರದು ಎಂದು ತಿಳಿಸಿದರು.

ಕು. ಮಾನಸ ಹಾಗೂ ಕು. ರಂಜಿತ ಪ್ರಾರ್ಥಿಸಿದರು. ಡಾ. ಸುದೀಪ್ ಬೇವುಕಲ್ಲು ಕಾರ್ಯಕ್ರಮ ನಿರ್ವಹಿಸಿದರು.

## ಬದುಕು ಬದಲಾಗಬೇಕಾದರೆ ವರ್ತನೆಯೂ ಬದಲಾಗಬೇಕು



ಬದುಕು ಬದಲಾಗಬೇಕಾದರೆ ವರ್ತನೆಯೂ ಬದಲಾಗಬೇಕು ಎಂದು ನಿವೃತ್ತ ಸೇನಾಧಿಕಾರಿಗಳಾದ ಕರ್ನಲ್ ಶ್ರೀ ಬಿ.ಎನ್. ಚೇತನ್‌ರವರು ಹೇಳಿದರು.

ದಿನಾಂಕ 20.12.2021ರಂದು ನಡೆದ ಜ್ಞಾನವಾರಿಧಿ–55 ಡಿಜಿಟಲ್ ಸಾಪ್ತಾಹಿಕ ಉಪನ್ಯಾಸ ಕಾರ್ಯಕ್ರಮದಲ್ಲಿ ಜೀವನದಲ್ಲಿ ಅತ್ಯುತ್ತಮ ಸಾಧನೆಯ ಸಿದ್ಧತೆ ವಿಷಯ ಕುರಿತು ಉಪನ್ಯಾಸ ನೀಡುತ್ತಾ, ನಮ್ಮ ಆತ್ಮವಿಶ್ವಾಸ, ನಾವು ಅಳವಡಿಸಿಕೊಂಡಿರುವ ಮೌಲ್ಯಗಳು, ನೀತಿ–ನಿಯಮಗಳು ನಮ್ಮ ಗುಣವನ್ನು ನಿರ್ಧರಿಸುತ್ತವೆ. ಮೊದಲು ನಮ್ಮನ್ನು ನಾವು ನಂಬಬೇಕು. ನಮ್ಮ ವರ್ತನೆ ಮತ್ತು ವ್ಯಕ್ತಿತ್ವವೇ ಜೀವನದಲ್ಲಿ ಬಹಳ ಮುಖ್ಯ. ನಮ್ಮ ಅಂತರಂಗ ಮತ್ತು ಬಹಿರಂಗದ ಸಂವಹನ ವ್ಯಕ್ತಿತ್ವವನ್ನು ರೂಪಿಸುವಲ್ಲಿ ಬಹಳ ಮಹತ್ವದ ಪಾತ್ರವನ್ನು ವಹಿಸುತ್ತದೆ. ಮಾನಸಿಕ ಸದೃಢತೆಯ ಜೊತೆಗೆ ದೈಹಿಕವಾಗಿಯೂ ಅತ್ಯಂತ ಸದೃಢವಾಗಿರುವುದು ಬಹಳ ಅವಶ್ಯಕ. ಭಯವು ನಮ್ಮನ್ನು ಕುಗ್ಗಿಸುತ್ತದೆ. ಧೈರ್ಯ ಮಾತ್ರ ನಮ್ಮನ್ನು ಗಟ್ಟಿ ನಿರ್ಧಾರ ತೆಗೆದುಕೊಳ್ಳಲು ಪ್ರೇರೇಪಿಸುತ್ತದೆ ಎಂದು ತಿಳಿಸಿದರು.

ಸುತ್ತೂರು ಶ್ರೀಕ್ಷೇತ್ರದ ಶಾಲಾ ವಿದ್ಯಾರ್ಥಿಗಳು ಪ್ರಾರ್ಥಿಸಿದರು. ಡಾ. ಹೊನ್ನೇಗೌಡ ಕಾರ್ಯಕ್ರಮ ನಿರ್ವಹಿಸಿದರು.

## ಮಹಿಳೆ ಬದುಕನ್ನು ನಿರ್ವಹಿಸುವ ರೀತಿ ವಿಶಿಷ್ಟವಾದುದು



ಮಹಿಳೆ ಬದುಕನ್ನು ನಿರ್ವಹಿಸುವ ರೀತಿ ವಿಶಿಷ್ಟವಾದುದು, ಅದರಲ್ಲೂ ಗ್ರಾಮೀಣ ಪ್ರದೇಶದ ಹೆಣ್ಣುಮಕ್ಕಳು ಇದರಲ್ಲಿ ಮುಂಚೂಣಿಯಲ್ಲಿರುತ್ತಾರೆ ಎಂದು ಶಿವಮೊಗ್ಗದ ಸಹ್ಯಾದ್ರಿ ಕಾಲೇಜಿನ ಸಹ ಪ್ರಾಧ್ಯಾಪಕರಾದ ಡಾ. ಶುಭಾ ಮರವಂತೆ ಹೇಳಿದರು.

ದಿನಾಂಕ 27.12.2021ರಂದು ನಡೆದ ಜ್ಞಾನವಾರಿಧಿ–56 ಡಿಜಿಟಲ್ ಸಾಪ್ತಾಹಿಕ ಉಪನ್ಯಾಸ ಕಾರ್ಯಕ್ರಮದಲ್ಲಿ ಮಹಿಳೆ–ಸಮಾಜ–ಸಂಸ್ಕೃತಿ ವಿಷಯ ಕುರಿತು ಉಪನ್ಯಾಸ ನೀಡುತ್ತಾ, ಇಂದು ಮಹಿಳೆ ವಿಶ್ವವನ್ನೇ ಆಳುವ ಮನೋಸ್ಥಿತಿ ಎಲ್ಲರಿಗೂ ಕಾಣುತ್ತಿದೆ. ಮಹಿಳೆಯರಲ್ಲಿ ಧಾರಣ ಶಕ್ತಿಯಿದೆ. ಭೂಮಿ, ಸಂಪತ್ತು, ವಿದ್ಯೆ ಇವೆಲ್ಲ ಹೆಣ್ಣಿನ ವ್ಯಕ್ತಿತ್ವದ ರೂಪಕಗಳು. ಇಡೀ ಜಗತ್ತನ್ನು ಸ್ತ್ರೀಶಕ್ತಿ ಕಾಪಾಡುತ್ತಿದೆ. ಅಕ್ಕಮಹಾದೇವಿಯವರ ವ್ಯಕ್ತಿತ್ವವನ್ನು ಸ್ತ್ರೀವಾದದ ನೆಲೆಯಲ್ಲಿ ಅರ್ಥಮಾಡಿಕೊಳ್ಳಬೇಕಿದೆ. ಬದುಕನ್ನು

ಎದುರಿಸುವ ದಿಟ್ಟತನವನ್ನು ಅಕ್ಕನಿಂದ ಕಲಿಯಬೇಕು. ಹೆಣ್ಣಿನ ಶಕ್ತಿಯನ್ನು ಸಾಮಾಜೀಕರಣಗೊಳಿಸಬೇಕಿದೆ. ಮಹಿಳೆಯರ ಮೇಲೆ ದೈನಂದಿನ ಜೀವನದಲ್ಲಿ ಸಾಕಷ್ಟು ದೌರ್ಜನ್ಯ ನಡೆಯುತ್ತಿದೆ. ಸ್ತ್ರೀಪರವಾದ ಧ್ವನಿ ಎತ್ತುವ ಜನರಿದ್ದರೂ ಇಂತಹ ಕ್ರೌರ್ಯಗಳು ನಿಲ್ಲುತ್ತಿಲ್ಲ. ಇಂದು ಕುಟುಂಬದಲ್ಲಿ ಸಣ್ಣಪುಟ್ಟ ಕಲಹಗಳಿಗೂ ನ್ಯಾಯಾಲಯದ ಮೆಟ್ಟಿಲು ಹತ್ತುವಂತಾಗಿದೆ. 12ನೇ ಶತಮಾನದಲ್ಲಿ ಬಸವಾದಿ ಶರಣರು ಹೆಣ್ಣಿನ ಪವಿತ್ರವಾದ ಪರಿಕಲ್ಪನೆಗೆ ರೂಪು ನೀಡಿದರು. ಇಂದಿಗೂ ಸ್ತ್ರೀಯರ ಘನತೆ ಉಳಿಯಲು ಸಾಕಷ್ಟು ಪುರುಷರ ಶ್ರಮವಿದೆ. ಇದಕ್ಕೆ ಬಸವಣ್ಣ, ಅಂಬೇಡ್ಕರ್, ಪುಲೆಯವರುಗಳೇ ಉದಾಹರಣೆ ಎಂದು ತಿಳಿಸಿದರು.

ಕು. ಭಾರತಿ ಹಾಗೂ ಕು. ಭಾನುಮತಿ ಪ್ರಾರ್ಥಿಸಿದರು. ಡಾ. ಅಂಬಿಕಾ ಕಾರ್ಯಕ್ರಮ ನಿರ್ವಹಿಸಿದರು.

## ಶಿವಾನುಭವ ದಾಸೋಹ

### ಸಮಸಮಾಜ ನಿರ್ಮಾಣ ಮಾಡಿದ ವಚನಕಾರರು



12ನೇ ಶತಮಾನದಲ್ಲಿದ್ದ ವಚನಕಾರರು ಸಮಾಜದಲ್ಲಿದ್ದ ಮೂಢನಂಬಿಕೆ, ಅಸ್ಪೃಶ್ಯತೆ, ಶೋಷಣೆ ಇವುಗಳ ವಿರುದ್ಧ ಹೋರಾಡಿ ಸಮಸಮಾಜ ನಿರ್ಮಿಸಲು ಹಗಲಿರುಳು ಶ್ರಮಿಸಿದರು ಎಂದು ಕೃಷಿಕರು ಹಾಗೂ ಹವ್ಯಾಸಿ ಪತ್ರಕರ್ತರಾದ ಶ್ರೀ ಚಿನ್ನಸ್ವಾಮಿ ವಡ್ಡಗೆರೆ ತಿಳಿಸಿದರು.

ದಿನಾಂಕ 25.12.2021 ರಂದು ಜೆಎಸ್‌ಎಸ್ ಬಡಾವಣೆ 2ನೇ ಹಂತದ ಶ್ರೀಮತಿ ನೀಲಮ್ಮ ಮತ್ತು ಪ್ರಭಾಕರ ಸಿದ್ದಪ್ಪ ಸಲಬಣ್ಣವರ್ ಸ್ವಗೃಹದಲ್ಲಿ ಏರ್ಪಡಿಸಿದ್ದ ಶಿವಾನುಭವ ದಾಸೋಹ–284 ಕಾರ್ಯಕ್ರಮದಲ್ಲಿ ಮಾತನಾಡುತ್ತಾ, ಬಸವಾದಿ ಶರಣರು 12ನೇ ಶತಮಾನದಲ್ಲೇ ಎಲ್ಲ ವರ್ಗದವರನ್ನು ಜೊತೆಯಲ್ಲಿ ಕರೆದುಕೊಂಡು ಸಮಾನತೆಯನ್ನು ನೀಡಿದರು. ಇಡೀ ಜಗತ್ತಿಗೆ ಕನ್ನಡ ಸಾಹಿತ್ಯ ಕೊಟ್ಟ ಶ್ರೇಷ್ಠ ಕೊಡುಗೆ ಎಂದರೆ ಅದು ವಚನ ಸಾಹಿತ್ಯ. ವಚನಗಳು ಅನುಭವದಿಂದ ಬಂದಿದ್ದು, ನಡೆ–ನುಡಿಯಲ್ಲಿ ಸಮಾನತೆಯನ್ನು ಹೊಂದಿ ನಮಗೆ ದಾರಿದೀಪವಾಗಿವೆ ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಪ್ರಾದೇಶಿಕ ಆಯುಕ್ತರ ಕಚೇರಿಯ ಹೆಚ್ಚುವರಿ ಆಯುಕ್ತರಾದ ಶ್ರೀ ಪಿ. ಶಿವರಾಜುರವರು ಮಾತನಾಡುತ್ತಾ, ವ್ಯಕ್ತಿಯು ಆರ್ಥಿಕವಾಗಿ ಪ್ರಬಲವಾಗುವುದರ ಜೊತೆಗೆ ಧಾರ್ಮಿಕ ಮತ್ತು ಆಧ್ಯಾತ್ಮಿಕತೆಯನ್ನು ಮೈಗೂಡಿಸಿಕೊಂಡಾಗ ಸಬಲರಾಗಲು ಸಾಧ್ಯ. ವಚನಕಾರರು ಸಮಾಜದ ಅಂಕುಡೊಂಕುಗಳನ್ನು ತಿದ್ದಿ ನಮಗೆ ಆದರ್ಶಪ್ರಾಯರಾಗಿದ್ದಾರೆ ಎಂದು ತಿಳಿಸಿದರು.

## ಜೆಎಸ್‌ಎಸ್ ಹಿರಿಯ ನಾಗರಿಕರ ಸಹಾಯವಾಣಿ

ಜೆಎಸ್‌ಎಸ್ ಮೆಡಿಕಲ್ ಸರ್ವಿಸ್ ಟ್ರಸ್ಟ್ ಮೈಸೂರು, ನಗರ ಪೊಲೀಸ್ ಇಲಾಖೆ ಮೈಸೂರು ಮತ್ತು ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಕರ್ನಾಟಕ ಸರ್ಕಾರ ಇವರ ಸಹಯೋಗದಲ್ಲಿ ಕಾರ್ಯನಿರ್ವಹಿಸುತ್ತಿರುವ ಜೆಎಸ್‌ಎಸ್ ಹಿರಿಯ ನಾಗರಿಕರ ಸಹಾಯವಾಣಿ ಕೇಂದ್ರ ಹಿರಿಯ ನಾಗರಿಕರ ವಿರುದ್ಧ ನಡೆಯುವ ಶೋಷಣೆ ಮತ್ತು ದುರಾಚಾರವನ್ನು ತಡೆಯಲು ಶ್ರಮಿಸುತ್ತಿದೆ.

ಮೈಸೂರು ಜಿಲ್ಲೆಯಲ್ಲಿನ ಹಿರಿಯ ನಾಗರಿಕರಿಗೆ ಯಾವುದೇ ರೀತಿಯ ಸಹಾಯ, ಸಹಕಾರ, ಕಾನೂನಿನ

ನೆರವು ಅಗತ್ಯವಿದ್ದಲ್ಲಿ ಶುಲ್ಕ ರಹಿತ ಸಂಖ್ಯೆ: 1090 ಅಥವಾ ದೂರವಾಣಿ ಸಂಖ್ಯೆ: 0821–2448138/2548253 ಮೂಲಕ ಬೆಳಗ್ಗೆ 9.00 ರಿಂದ ಸಂಜೆ 6.00 ಗಂಟೆಯವರೆಗೆ ಸಂಪರ್ಕಿಸಬಹುದಾಗಿದೆ.

## ದೇವರು ನೀಡಿರುವ ಬುದ್ಧಿಯನ್ನು ಸದ್ಬಳಕೆ ಮಾಡಿಕೊಳ್ಳಬೇಕು



ದೇವರು ನೀಡಿರುವ ಬುದ್ಧಿಯನ್ನು ಸದ್ಬಳಕೆ ಮಾಡಿಕೊಳ್ಳಬೇಕು ಎಂದು ಪರಮಪೂಜ್ಯ ಜಗದ್ಗುರುಗಳು ಹೇಳಿದರು.

ಸುತ್ತೂರು ಶ್ರೀಕ್ಷೇತ್ರದಲ್ಲಿ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ಮತ್ತು ಕದಳಿ ಮಹಿಳಾ ವೇದಿಕೆ ವತಿಯಿಂದ ದಿನಾಂಕ 11.12.2021ರಂದು ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳ ಸಹಯೋಗದಲ್ಲಿ ನಡೆದ ವಿಶೇಷ ಪ್ರತಿಭಾವಂತ ಬಾಲಕ ಕು. ರಿಷಿ ಶಿವಪ್ರಸನ್ನರವರ ಕೃತಿ ಬಿಡುಗಡೆ, ಸಂವಾದ ಹಾಗೂ ಸನ್ಮಾನ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿ ಆಶೀರ್ವದಿಸುತ್ತಾ ತಿಳಿಸಿದರು. ದೇವರು ಕೊಟ್ಟಿರುವ ಬುದ್ಧಿಯನ್ನು ಉಪಯೋಗಿಸಿಕೊಂಡು ರಿಷಿಯಂತೆ ಅದ್ಭುತ ಸಾಧನೆ ಮಾಡಬಹುದು. ವಿದ್ಯಾರ್ಥಿಗಳು ಒಬ್ಬರನ್ನು ಇನ್ನೊಬ್ಬರಿಗೆ ಹೋಲಿಸಿಕೊಂಡು ಕೀಳರಿಮೆ ಪಡಬಾರದು. ತಮ್ಮಲ್ಲಿರುವ ಪ್ರತಿಭೆಯನ್ನು ಬಳಸಿಕೊಂಡು ಮುಟಿದೇಳಬೇಕು. ಏಳು ವರ್ಷದ ಬಾಲಕ ರಿಷಿ ರಚಿಸಿರುವ ಎಲಿಮೆಂಟ್ಸ್ ಆಫ್ ಅರ್ಥ್ ಕೃತಿ ಸಂವಾದ ರೂಪದಲ್ಲಿದೆ. ಇದರಲ್ಲಿನ ವಿವರಣಾತ್ಮಕ ಅಂಶಗಳು ವಿದ್ಯಾರ್ಥಿಗಳಿಗೆ ಅರ್ಥವಾಗುವಂತಿವೆ. ಮುಸ್ತಕ ಪರಿಸರಕ್ಕೂ ಪೂರಕವಾಗಿದೆ ಎಂದು ತಿಳಿಸಿದರು.

ಸಚಿವರಾದ ಶ್ರೀ ಬಿ.ಸಿ. ನಾಗೇಶ್‌ರವರು 21ನೇ ಶತಮಾನ ಭಾರತೀಯರ ಶತಮಾನ ಎಂಬುದು ಮುಂದಿನ ದಿನಗಳಲ್ಲಿ ಸಾಕಾರಗೊಳ್ಳಲಿದೆ. ರಾಜ್ಯದ ಏಳು ವರ್ಷದ ಜೀನಿಯಸ್ ಬಾಲಕ ರಿಷಿ ಶಿವ ಪ್ರಸನ್ನ ತನ್ನ ಬುದ್ಧಿಶಕ್ತಿಯಿಂದ ವಿಶ್ವದಾಖಲೆ ಮಾಡಿದ್ದಾನೆ. ಇದು ಅತ್ಯಂತ ಹೆಮ್ಮೆಯ ವಿಷಯ. ಹೊಸ ಶಿಕ್ಷಣ ನೀತಿ ಬೌದ್ಧಿಕ ಸಾಮರ್ಥ್ಯದ ಜೊತೆ ಕೌಶಲಗಳನ್ನು ಹೆಚ್ಚಿಸುವ ಉದ್ದೇಶ ಹೊಂದಿದೆ ಎಂದರು.

ಸಾಹಿತಿಗಳಾದ ಡಾ. ಗೊ.ರು. ಚನ್ನಬಸಪ್ಪನವರು ರಿಷಿ ಶಿವಪ್ರಸನ್ನನಂತಹ ಅಸಾಧಾರಣ ಬಾಲಕನನ್ನು ಕಂಡಾಗ ಅಚ್ಚರಿಯಾಗುತ್ತದೆ. ಸರ್ಕಾರ ಇಂತಹ ಬಾಲಪ್ರತಿಭೆಗಳನ್ನು ಗುರುತಿಸಿ ಪ್ರೋತ್ಸಾಹ ನೀಡಿದರೆ ದೇಶದ ಅಭಿವೃದ್ಧಿಗೆ ಪೂರಕವಾಗಲಿದೆ ಎಂದು ತಿಳಿಸಿದರು.

ಬಾಲ ಪ್ರತಿಭೆ ರಿಷಿ ಶಿವಪ್ರಸನ್ನರವರು ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿದರು. ಪರಿಷತ್ತಿನ ವತಿಯಿಂದ ಅವರನ್ನು ಸನ್ಮಾನಿಸಲಾಯಿತು.

ಶಾಸಕರಾದ ಡಾ. ಯತೀಂದ್ರ ಸಿದ್ದರಾಮಯ್ಯ ಕೃತಿ ಬಿಡುಗಡೆಗೊಳಿಸಿದರು. ಪ್ರೊ. ಮಲೆಯೂರು ಗುರುಸ್ವಾಮಿಯವರು ಕೃತಿ ಪರಿಚಯಿಸಿದರು. ಜೆಎಸ್‌ಎಸ್ ಶಾಲಾ ವಿದ್ಯಾರ್ಥಿಗಳು ಪ್ರಾರ್ಥಿಸಿದರು. ಶ್ರೀಮತಿ ಶಾರದಾ ಶಿವಲಿಂಗಸ್ವಾಮಿ ಸ್ವಾಗತಿಸಿದರು. ಶ್ರೀ ಮ.ಗು. ಸದಾನಂದಯ್ಯ ಪ್ರಾಸ್ತಾವಿಕವಾಗಿ ಮಾತನಾಡಿದರು. ಶ್ರೀಮತಿ ಎಂ.ಪಿ. ನೀಲಾಂಬಿಕಾ ನಾಗರಾಜ್ ವಂದಿಸಿದರು. ಡಾ. ಹೆಚ್.ಟಿ. ಶೈಲಜ ಕಾರ್ಯಕ್ರಮ ನಿರೂಪಿಸಿದರು. ಶ್ರೀ ಎಸ್.ಪಿ. ಉದಯಶಂಕರ್, ಶ್ರೀ ಹೆಳವರಹುಂಡಿ ಸಿದ್ಧಪ್ಪ, ಶ್ರೀ ಜಿ.ಎಲ್. ತ್ರಿಪುರಾಂತಕ ಮೊದಲಾದವರು ಉಪಸ್ಥಿತರಿದ್ದರು.

## ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷರಾಗಿ ಪ್ರೊ. ಮಲೆಯೂರು ಗುರುಸ್ವಾಮಿ ಆಯ್ಕೆ



ಬೆಂಗಳೂರಿನಲ್ಲಿ ದಿನಾಂಕ 3.12.2021ರಂದು ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಗೌರವಾಧ್ಯಕ್ಷರುಗಳಾದ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು ಹಾಗೂ ಗದಗ ಶ್ರೀ ತೋಂಟದಾರ್ಯ ಮಠದ ಜಗದ್ಗುರು ಡಾ. ಶ್ರೀ ತೋಂಟದ ಸಿದ್ಧರಾಮ ಮಹಾಸ್ವಾಮಿಗಳವರ ಸಾನ್ನಿಧ್ಯದಲ್ಲಿ ನಡೆದ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಕಳೆದ 25 ವರ್ಷಗಳಿಂದ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದ ಡಾ. ಗೊ.ರು. ಚನ್ನಬಸಪ್ಪನವರು ವಯೋಮಾನ ಕಾರಣದಿಂದಾಗಿ ಸ್ವಯಂ ನಿವೃತ್ತಿ ಹೊಂದುವ ಇಚ್ಛೆ ವ್ಯಕ್ತಪಡಿಸಿದ ಕಾರಣ ಅವರ ಸ್ಥಾನಕ್ಕೆ ಹಿರಿಯ ಸಾಹಿತಿಗಳಾದ ಪ್ರೊ. ಮಲೆಯೂರು ಗುರುಸ್ವಾಮಿಯವರನ್ನು ಸರ್ವಾನುಮತದಿಂದ ಪರಿಷತ್ತಿನ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಯಿತು.

## ಕೋವಿಡ್ ಸಂತ್ರಸ್ತ ಕುಟುಂಬದ ಮಕ್ಕಳಿಗೆ ಸುತ್ತೂರು ಜೆಎಸ್‌ಎಸ್ ವಸತಿ ಶಾಲೆಯಲ್ಲಿ ಉಚಿತ ಶಿಕ್ಷಣ

ಕೋವಿಡ್–19 ಸಂತ್ರಸ್ತರ ಕುಟುಂಬದ ಮಕ್ಕಳಿಗೆ **ಸುತ್ತೂರು ಶ್ರೀಕ್ಷೇತ್ರದ ಜೆಎಸ್‌ಎಸ್ ವಸತಿ ಶಾಲೆಯಲ್ಲಿ** 2021–22ನೇ ಸಾಲಿನಲ್ಲಿ ಉಚಿತ ಶಿಕ್ಷಣದ ವ್ಯವಸ್ಥೆಯನ್ನು ಪರಮಪೂಜ್ಯ ಜಗದ್ಗುರುಗಳವರ ಕೃಪಾಶೀರ್ವಾದದೊಂದಿಗೆ ಕಲ್ಪಿಸಲಾಗಿದೆ. ಕೋವಿಡ್–19 ಸಂದರ್ಭದಲ್ಲಿ ಜೆಎಸ್‌ಎಸ್ ಮಹಾವಿದ್ಯಾಪೀಠದ ವತಿಯಿಂದ ಕೋವಿಡ್ ಸಂತ್ರಸ್ತ ಕುಟುಂಬದ 1 ರಿಂದ 10ನೇ ತರಗತಿಯ ಮಕ್ಕಳಿಗೆ ಸುತ್ತೂರು ಜೆಎಸ್‌ಎಸ್ ವಸತಿ ಶಾಲೆಯಲ್ಲಿ ಉಚಿತ ಶಿಕ್ಷಣ ನೀಡುವುದಾಗಿ ಪತ್ರಿಕಾ ಪ್ರಕಟಣೆ ನೀಡಿದ್ದ ಹಿನ್ನಲೆಯಲ್ಲಿ ಕರ್ನಾಟಕ ರಾಜ್ಯದ ಬೆಂಗಳೂರು, ಮೈಸೂರು, ರಾಮನಗರ,

ಚಾಮರಾಜನಗರ, ದಾವಣಗೆರೆ, ವಿಜಯಪುರ, ಕಲ್ಬುರ್ಗಿ, ಚಿಕ್ಕಮಗಳೂರು ಜಿಲ್ಲೆಗಳಿಂದ ಜೆಎಸ್‌ಎಸ್ ವಸತಿ ಶಾಲೆಗೆ ಉಚಿತ ಶಿಕ್ಷಣಕ್ಕೆ 5 ರಿಂದ 10ನೇ ತರಗತಿಯವರೆಗೆ 11 ವಿದ್ಯಾರ್ಥಿಗಳು ಪ್ರವೇಶ ಪಡೆದು ವ್ಯಾಸಂಗ ಮಾಡುತ್ತಿದ್ದಾರೆ.

ಸುತ್ತೂರು ವಸತಿ ಶಾಲೆಯಲ್ಲಿ ಬಡ ಕುಟುಂಬಗಳಿಂದ ಬಂದ 4000ಕ್ಕೂ ಹೆಚ್ಚು ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡುತ್ತಿದ್ದು, ಕರ್ನಾಟಕ ರಾಜ್ಯದ ಮಕ್ಕಳಲ್ಲದೆ ನೆರೆ ರಾಜ್ಯಗಳಾದ ತಮಿಳುನಾಡು, ಆಂಧ್ರಪ್ರದೇಶ, ಮಹಾರಾಷ್ಟ್ರ ರಾಜ್ಯಗಳಲ್ಲದೆ, ದೂರದ ರಾಜ್ಯಗಳಾದ ಮೇಘಾಲಯ, ಮಣಿಪುರ, ಜಾರ್ಖಂಡ್, ಬಿಹಾರ್ ರಾಜ್ಯಗಳ ಮಕ್ಕಳು ವ್ಯಾಸಂಗ ಮಾಡುತ್ತಿದ್ದಾರೆ.

## ಆಯುರ್ವೇದ ಚಿಕಿತ್ಸೆ ಅತ್ಯಂತ ಪರಿಣಾಮಕಾರಿ

ಆಯುರ್ವೇದವು ಕಾಲಕಾಲಕ್ಕೆ ತಕ್ಕಂತೆ ಆಯಾ ಕಾಲಘಟ್ಟದಲ್ಲಿ ಉದ್ಭವಿಸಿದ ಎಲ್ಲ ರೋಗಗಳ ಚಿಕಿತ್ಸೆಗೆ ಅತ್ಯಂತ ಪರಿಣಾಮಕಾರಿಯಾಗಿದೆ ಎಂದು ಬೆಂಗಳೂರಿನ ಸ್ಪರ್ಶ ಆಸ್ಪತ್ರೆ ಸಮೂಹಗಳ ಮುಖ್ಯಸ್ಥರು ಹಾಗೂ ಖ್ಯಾತ ಶಸ್ತ್ರಚಿಕಿತ್ಸಾ ತಜ್ಞರಾದ ಡಾ. ಶರಣ್ ಶಿವರಾಜ ಪಾಟೀಲ್‌ರವರು ಹೇಳಿದರು.

ಮೈಸೂರಿನ ಸುತ್ತೂರು ಶ್ರೀಮಠದಲ್ಲಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯಸಾನಿಧ್ಯದಲ್ಲಿ ದಿನಾಂಕ 26.12.2021ರಂದು ಜರುಗಿದ **ಜೆಎಸ್‌ಎಸ್ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯದ** ವಿಶಿಖಾನುಪ್ರವೇಶ ಪದವೀಧರರ ದಿನಾಚರಣೆಯಲ್ಲಿ ಮಾತನಾಡುತ್ತಾ ವೈದ್ಯರು ರೋಗಿಯ ಅಂತರಂಗವನ್ನು ಅರಿತು, ರೋಗದ ತಪಾಸಣೆ, ಆರೈಕೆ ಹಾಗೂ ಕಾಳಜಿಪೂರ್ವಕವಾದ ಕೈಂಕರ್ಯವನ್ನು ಮಾಡಬೇಕು. ಆಗ ಮಾತ್ರ ವೈದ್ಯ ಪದವಿ ಪಡೆದಿರುವುದು ಸಾರ್ಥವಾಗುತ್ತದೆ. ನಾವು ಮಾಡುವ ಸೇವೆ ಜನಮಾನಸದಲ್ಲಿ ನೆಲೆಸಬೇಕು. ಪ್ರಲೋಭನೆಗಳನ್ನು ಬಿಟ್ಟು, ನೈತಿಕತೆಯಿಂದ, ಆಯಾ ವೈದ್ಯಪದ್ಧತಿಯ ನೈಪುಣ್ಯತೆಯನ್ನು ಕರಗತ ಮಾಡಿಕೊಂಡು, ವಿಶ್ಲೇಷಣಾತ್ಮಕವಾಗಿ ಚರ್ಚಿಸಿ ರೋಗದ ನಿರ್ಣಯ ಹಾಗೂ ಚಿಕಿತ್ಸೆಗಳನ್ನು ನೀಡಿದಾಗ ಮಾತ್ರ ಇಂದಿನ ಸಮಾಜದಲ್ಲಿ ಯಶಸ್ವಿ ವೈದ್ಯರಾಗಬಹುದು ಎಂದು ತಿಳಿಸಿದರು.

ಜೆಎಸ್‌ಎಸ್ ಗವರ್ನಿಂಗ್ ಕೌನ್ಸಿಲ್ ಸದಸ್ಯರು ಹಾಗೂ ಸಿಸಿಐಎಮ್‌ನ ನಿವೃತ್ತ ಉಪಾಧ್ಯಕ್ಷರಾದ ಡಾ. ಜಯಪ್ರಕಾಶ್ ನಾರಾಯಣ್‌ರವರು ಪ್ರತಿಜ್ಞಾವಿಧಿ ಬೋಧಿಸಿದರು. ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನ ವಿಶ್ವವಿದ್ಯಾನಿಲಯದ ರಾಜ್ಯಮಟ್ಟದ ಸ್ನಾತಕೋತ್ತರ ವಿದ್ಯಾರ್ಥಿಗಳ ರ‍್ಯಾಂಕ್‌ಗಳು ಹಾಗೂ ಸ್ನಾತಕೋತ್ತರ ವಿದ್ಯಾರ್ಥಿಗಳ ಪದವಿ ಪ್ರದಾನ ಕಾರ್ಯಕ್ರಮವನ್ನು ಸಂಯೋಜಕರಾದ ಡಾ. ಶ್ರೀಷಾನಂದ ಶರ್ಮರವರು ನಡೆಸಿಕೊಟ್ಟರು. ವಿಶ್ವವಿದ್ಯಾಲಯದ ರ‍್ಯಾಂಕ್ ವಿಜೇತರ ಪಟ್ಟಿಯನ್ನು ಸಂಯೋಜಕರಾದ ಡಾ. ದೀಪಾ ಸಿ. ಪಾಟೀಲ್ ಹಾಗೂ ಕಿರಿಯ ಕಲಿಕಾ ವೈದ್ಯರ ಸಂಯೋಜಕರಾದ ಡಾ. ಡಿ. ಸಂಧ್ಯಾರಾಣಿಯವರು ಪದವಿ ಸ್ವೀಕರಿಸುವ ವಿದ್ಯಾರ್ಥಿಗಳ ಹೆಸರುಗಳನ್ನು ಪ್ರಕಟಿಸಿದರು. ಆಯುರ್ವೇದ ಹಿಮಾಲಯ ಔಷಧ ಕಂಪನಿಯವರು ನೀಡುವ ಜೀವಕ ಹಾಗೂ ಆಯುರ್ವಿಶಾರದ ನಗದು ಪ್ರಶಸ್ತಿಗಳನ್ನು ಕ್ರಮವಾಗಿ ಡಾ. ಆಫ್ರಾಇರಮ್ ಹಾಗೂ ಡಾ. ಎಂ. ನವ್ಯಶ್ರೀರಿಗೆ ನೀಡಲಾಯಿತು. ಡಾ. ಸುಶ್ಮಿತಾರಾಣಿಯವರಿಗೆ ಅತ್ಯುತ್ತಮ ಕಿರಿಯ ಕಲಿಕಾ ವೈದ್ಯ ಪ್ರಶಸ್ತಿ, ಡಾ. ಉಮ್ಮೆ ಹಬೀಬಾ ಹಾಗೂ ಡಾ. ಕೌಮಿನಾಖಾನ್, ಡಾ. ಸಿ.ಆರ್. ದೀಪ್ತಿ. ಹಾಗೂ ಡಾ. ಎಸ್. ಐಶ್ವರ್ಯರವರುಗಳಿಗೆ ಅತ್ಯುತ್ತಮ ನಿರ್ಗಮಿತ ವೈದ್ಯ ಪ್ರಶಸ್ತಿಯನ್ನು ಪ್ರದಾನ ಮಾಡಲಾಯಿತು. ವಿದ್ಯಾರ್ಥಿಗಳಾದ ಡಾ. ಎ.ಎಮ್. ಚೈತ್ರ ಹಾಗೂ ಡಾ. ಎಂ.ಎಸ್. ಆಶಿತಾ ತಮ್ಮ ಅನುಭವವನ್ನು ಹಂಚಿಕೊಂಡರು.

ಕಾರ್ಯನಿರ್ವಾಹಕ ಕಾರ್ಯದರ್ಶಿಗಳಾದ ಡಾ. ಸಿ.ಜಿ. ಬೆಟಸೂರಮಠ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದರು. ವೈದ್ಯಕೀಯ ಶಿಕ್ಷಣ ವಿಭಾಗದ ನಿರ್ದೇಶಕರಾದ ಶ್ರೀ ಆರ್. ಮಹೇಶ್, ಶ್ರೀಮತಿ ಮೀನಾ ಶರಣ್ ಪಾಟೀಲ್ ಉಪಸ್ಥಿತರಿದ್ದರು. ಕು. ಸುಮೇಧಾ ಭಟ್ ಹಾಗೂ ವೃಂದದವರು ಪ್ರಾರ್ಥಿಸಿದರು.

ಪ್ರಾಂಶುಪಾಲರಾದ ಡಾ. ಸರ್ಬೇಶ್ವರ್‌ಕರ್‌ರವರು ಸ್ವಾಗತಿಸಿ, ವಾರ್ಷಿಕ ವರದಿಯನ್ನು ಮಂಡಿಸಿದರು. ಪ್ರಾಧ್ಯಾಪಕರಾದ ಡಾ. ಶಿವಪ್ರಸಾದ್ ಹುಡೇದ್‌ರವರು ವಂದಿಸಿದರು. ಕು. ಅಶ್ಮಿತಾ ಹಾಗೂ ವೃಂದದವರು ರಾಷ್ಟ್ರಗೀತೆ ಹಾಡಿದರು. ಡಾ. ಬಿ.ಜಿ. ಮಧುಸೂದನ್ ಕಾರ್ಯಕ್ರಮ ನಿರೂಪಿಸಿದರು.

## ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆಯಲ್ಲಿ ಧನ್ವಂತರಿ ಜಯಂತಿ



**ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆಯಲ್ಲಿ** ಧನ್ವಂತರಿ ಜಯಂತಿಯ ಪ್ರಯುಕ್ತ ದಿನಾಂಕ 2.12.2021ರಂದು ಧನ್ವಂತರಿ ಹೋಮವನ್ನು ಏರ್ಪಡಿಸಲಾಗಿತ್ತು. ಬೆಳಿಗ್ಗೆ 8.30ರಿಂದ ಹೋಮ-ಪೂಜಾ ವಿಧಾನಗಳನ್ನು ನೆರವೇರಿಸಲಾಯಿತು. 11.00 ಘಂಟೆಗೆ ಪೂರ್ಣಾಹುತಿ ನಡೆಯಿತು.

ಪೂಜಾ ಕಾರ್ಯಕ್ರಮದಲ್ಲಿ ಜೆಎಸ್‌ಎಸ್ ವೈದ್ಯಕೀಯ ಶಿಕ್ಷಣ ವಿಭಾಗದ ನಿರ್ದೇಶಕರಾದ ಶ್ರೀ ಆರ್. ಮಹೇಶ್ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕರಾದ ಡಾ. ಸರ್ಬೇಶ್ವರ್‌ಕರ್‌ರವರು, ವೈದ್ಯರುಗಳು, ಸಿಬ್ಬಂದಿ ವರ್ಗದವರು, ವಿದ್ಯಾರ್ಥಿಗಳು, ಕಲಿಕಾ ವೈದ್ಯರುಗಳು ಹಾಗೂ ಇತರರು ಪಾಲ್ಗೊಂಡಿದ್ದರು. ಡಾ. ದೀಪಾ ಸಿ. ಪಾಟೀಲ್‌ರವರು ಪ್ರಸಾದ ಸೇವೆ ನೆರವೇರಿಸಿದರು.

## ರಾಷ್ಟ್ರೀಯ ಶಿಕ್ಷಣ ನೀತಿ-2020 ಕುರಿತು ರಾಷ್ಟ್ರಮಟ್ಟದ ವೆಬಿನಾರ್

ದಿನಾಂಕ 30.11.2021ರಂದು ಕಾಲೇಜು ಶಿಕ್ಷಣ ಇಲಾಖೆ ಹಾಗೂ **ಗುಂಡ್ಲುಪೇಟೆ ಜೆಎಸ್‌ಎಸ್ ಕಲಾ ಮತ್ತು ವಾಣಿಜ್ಯ ಕಾಲೇಜು** ಮತ್ತು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ದೈಹಿಕ ಶಿಕ್ಷಣ ವಿಭಾಗ ಹಾಗೂ ಗ್ರಂಥಾಲಯ ಮತ್ತು ಮಾಹಿತಿ ಕೇಂದ್ರ, ಭಾರತೀಯ ದೈಹಿಕ ಶಿಕ್ಷಣ ಪ್ರತಿಷ್ಠಾನ ಕರ್ನಾಟಕ ವಲಯ (ರಿ), ಮೈಸೂರು

ವಿಶ್ವವಿದ್ಯಾನಿಲಯದ ಕಾಲೇಜು ದೈಹಿಕ ಶಿಕ್ಷಣ ಕ್ರೀಡಾ ನಿರ್ದೇಶಕರ ಸಂಘ (ರಿ) ಹಾಗೂ ಐಕ್ಯೂಎಸಿ ಸಹಯೋಗದೊಂದಿಗೆ ಇಂಪ್ಲಿಮೆಂಟಿಂಗ್ ಆಫ್ ಫಿಸಿಕಲ್ ಎಜುಕೇಷನ್ ಸ್ಪೋರ್ಟ್ಸ್ ಅಂಡ್ ಯೋಗ ಅಂಡರ್ ನ್ಯಾಷನಲ್ ಎಜುಕೇಷನ್ ಪಾಲಿಸಿ, ಇನ್ಫರ್ಮೇಷನ್ ಸೋರ್ಸ್–2020 ಎಂಬ ವಿಷಯದ ಬಗ್ಗೆ ಒಂದು ದಿನದ ರಾಷ್ಟ್ರಮಟ್ಟದ ವೆಬಿನಾರ್ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಮೈಸೂರು ಕಾಲೇಜು ಶಿಕ್ಷಣ ಇಲಾಖೆ ಸಹಾಯಕ ನಿರ್ದೇಶಕ ರಾದ ಶ್ರೀ ನಾಗೇಂದ್ರಪ್ರಸಾದ್‌ರವರು ಕಾರ್ಯಕ್ರಮವನ್ನು ಉದ್ಘಾಟಿಸಿ ರಾಷ್ಟ್ರೀಯ ಶಿಕ್ಷಣ ನೀತಿಯ ಮಹತ್ವ ಮತ್ತು ಅನುಷ್ಠಾನದ ಬಗ್ಗೆ ಮಾತನಾಡಿದರು. ಟಿ. ನರಸೀಪುರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ದೈಹಿಕ ಶಿಕ್ಷಣ ವಿಭಾಗದ ನಿರ್ದೇಶಕರಾದ ಡಾ. ಉದಯಕುಮಾರ್‌ರವರು ಆಶಯನುಡಿಗಳನ್ನಾಡಿ ರಾಷ್ಟ್ರೀಯ ಶಿಕ್ಷಣ ನೀತಿಯು ಶಿಕ್ಷಣ ಕ್ಷೇತ್ರಕ್ಕೆ ಒಂದು ಹೊಸ ಆಯಾಮವನ್ನು ನೀಡಲು ಬಹಳ ಉಪಯುಕ್ತವಾಗಿದೆ ಎಂದರು.

ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾಲೇಜು ಶಿಕ್ಷಣ ವಿಭಾಗದ ಸಹಾಯಕ ನಿರ್ದೇಶಕರಾದ ಶ್ರೀ ಬಿ. ನಿರಂಜನಮೂರ್ತಿಯವರು ರಾಷ್ಟ್ರೀಯ ಶಿಕ್ಷಣ ನೀತಿ–2020 ಕುರಿತು ಮಾತನಾಡುತ್ತ 30 ವರ್ಷಗಳ ನಂತರ ಶಿಕ್ಷಣ ಕ್ಷೇತ್ರದಲ್ಲಿ ಕೌಶಲ್ಯ ಆಧಾರಿತ ಅಧ್ಯಯನ ವ್ಯವಸ್ಥೆ ಮನ್ನಣೆ ಪಡೆದುಕೊಳ್ಳುತ್ತಿದೆ. ವಿದ್ಯಾರ್ಥಿಗಳ ಸರ್ವಾಂಗೀಣ ಅಭಿವೃದ್ಧಿಗೆ ಇದು ಸಹಕಾರಿಯಾಗಲಿದ್ದು ದೈಹಿಕ ಶಿಕ್ಷಣ ಹಾಗೂ ಗ್ರಂಥಾಲಯ ವಿಭಾಗಗಳು ಬಹಳ ವಿಶಿಷ್ಟ ಸ್ಥಾನವನ್ನು ಪಡೆದಿರುವುದು ಸಂತೋಷದ ವಿಷಯ ಎಂದು ತಿಳಿಸಿದರು.

ಪ್ರಾಂಶುಪಾಲರಾದ ಶ್ರೀ ಮರಿಸ್ವಾಮಪ್ಪ ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ದೈಹಿಕ ಶಿಕ್ಷಣ ಹಾಗೂ ಗ್ರಂಥಾಲಯ ವಿಭಾಗಗಳ ಸ್ಥಾನ ಮತ್ತು ಅಧ್ಯಯನ ವಿಷಯ ವ್ಯಾಪ್ತಿಯ ಬಗ್ಗೆ ತಿಳಿಸಿದರು. ಕಾರ್ಯಕ್ರಮದಲ್ಲಿ ಡಾ. ಚಂದ್ರಶೇಖರ್, ಶ್ರೀ ಎನ್. ಮಲ್ಲುಸ್ವಾಮಿ ಹಾಗೂ ಶ್ರೀ ಡಿ.ಬಿ. ಗಿರೀಶ್‌ಕುಮಾರ್ ಉಪಸ್ಥಿತರಿದ್ದರು. ಕು. ಸಂಯುಕ್ತ ಸಿಂಗ್ ಪ್ರಾರ್ಥಿಸಿದರು. ಡಾ. ಜಿ. ಮಲ್ಲೇಶ್ ಸ್ವಾಗತಿಸಿದರು. ಶ್ರೀ ಶ್ರೀನಿವಾಸನಾಯಕ್ ವಂದಿಸಿದರು.

## ಗ್ರಾಹಕರ ಸಂರಕ್ಷಣಾ ಕಾಯ್ದೆಯ ಅರಿವಿರಲಿ

ಗ್ರಾಹಕರು ತಾವು ಖರೀದಿಸಿರುವ ವಸ್ತು ಅಥವಾ ಸೇವೆಗಳಲ್ಲಿ ನ್ಯೂನ್ಯತೆ ಉಂಟಾದಾಗ ಪ್ರಶ್ನಿಸಿ ಪರಿಹಾರ ಪಡೆಯಲು ಗ್ರಾಹಕ ಸಂರಕ್ಷಣಾ ಕಾಯ್ದೆಯನ್ನು ಜಾರಿಗೆ ತರಲಾಗಿದೆ ಎಂದು ಚಾಮರಾಜನಗರ ಜಿಲ್ಲೆಯ ಗೌ. ಪ್ರಧಾನ ಮತ್ತು ಜಿಲ್ಲಾ ಸತ್ರ ನ್ಯಾಯಾಧೀಶರು ಮತ್ತು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರಾದ ಶ್ರೀ ಸದಾಶಿವ ಎಸ್. ಸುಲ್ತಾನಪುರಿಯವರು ಹೇಳಿದರು.

**ಚಾಮರಾಜನಗರದ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ** ದಿನಾಂಕ 24.12.2021ರಂದು ನಡೆದ ರಾಷ್ಟ್ರೀಯ ಗ್ರಾಹಕರ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡುತ್ತಾ, ಪ್ರಸ್ತುತ ದಿನಗಳಲ್ಲಿ ಗ್ರಾಹಕರ ಕಾಯ್ದೆಯ ಬಗ್ಗೆ ಸಾಮಾನ್ಯ ಜನರಿಗೆ ಅರಿವು ಕಡಿಮೆ, ಪ್ರತಿನಿತ್ಯ ಬಳಸುವ ವಸ್ತುಗಳಲ್ಲಿನ ಗುಣಮಟ್ಟ ಮತ್ತು ಪ್ರಮಾಣಗಳನ್ನು ಪರಿಶೀಲಿಸಬೇಕು, ಇದರಲ್ಲಿ ವ್ಯತ್ಯಾಸಗಳು ಕಂಡುಬಂದರೆ ನ್ಯಾಯಾಲಯದ ಮೊರೆ ಹೋಗಬಹುದು. ಖರೀದಿಸುವ ಪ್ರತಿ ವಸ್ತುವಿಗೂ ರಸೀದಿ ಪಡೆಯುವುದು ಬಹಳ ಮುಖ್ಯ ಎಂದು ಹೇಳಿ ಕಾಯ್ದೆಯ ಪರಿಣಾಮ ಮತ್ತು ಅದರ ಚಲಾಯಿಸುವಿಕೆ ಬಗ್ಗೆ ವಿವರವಾಗಿ ತಿಳಿಸಿದರು.

ಚಾಮರಾಜನಗರ ಜಿಲ್ಲೆಯ ಜಿಲ್ಲಾ ಗ್ರಾಹಕರ ಪರಿಹಾರ ಆಯೋಗದ ಸದಸ್ಯರಾದ ಶ್ರೀಮತಿ ಗೌರಮ್ಮಣಿಯವರು ಗ್ರಾಹಕರ ಸಂರಕ್ಷಣಾ ಕಾಯ್ದೆ–2019 ಎಂಬ ವಿಷಯದ ಬಗ್ಗೆ ಉಪನ್ಯಾಸವನ್ನು ನೀಡುತ್ತಾ ಮುಂದುವರೆದ ಇಂದಿನ ದಿನಗಳಲ್ಲಿ ಆನ್‌ಲೈನ್ ಬಳಕೆದಾರರು ಹೆಚ್ಚಾಗಿದ್ದಾರೆ. ಇಲ್ಲಿಯೂ ಕೆಲವೊಂದು ಮೋಸಗಳು ಗ್ರಾಹಕರಿಗೆ ಆಗುತ್ತಿವೆ. ಗ್ರಾಹಕರು ಜಾಗೃತಿ ಹೊಂದಬೇಕಾಗಿದೆ. ಅದನ್ನು ಮೂಡಿಸುವ ಹೊಣೆಗಾರಿಕೆ ಕಾನೂನು ಪಾಲಕರದು. ಕಾನೂನು ಪುಸ್ತಕದಲ್ಲಿ ಇದ್ದರೆ ಸಾಲದು, ಬಳಕೆಗೆ

ಬರಬೇಕು. ಆಗ ವ್ಯವಸ್ಥೆಗೆ ಅರ್ಥ ಬರುತ್ತದೆ. ಕೊಳ್ಳುವವರೇ ಎಚ್ಚರ ಎಂಬುದಲ್ಲ, ಮಾರುವವರೇ ಎಚ್ಚರ ಎಂಬ ಪ್ರಜ್ಞೆ ಎಲ್ಲರಿಗೂ ಬರಬೇಕು. ಹಕ್ಕು ಇರುವಲ್ಲಿ ಪರಿಹಾರ ಇದ್ದೇ ಇರುತ್ತದೆ ಎಂದು ಹೇಳಿದರು.

ಚಾಮರಾಜನಗರ ಜಿಲ್ಲೆಯ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಸದಸ್ಯ ಕಾರ್ಯದರ್ಶಿಗಳಾದ ಶ್ರೀ ಎಂ. ಶ್ರೀಧರ್‌ರವರು ಪ್ರತಿಯೊಬ್ಬ ವ್ಯಕ್ತಿಯು ತಮ್ಮ ಹಕ್ಕುಗಳನ್ನು ತಿಳಿಯಬೇಕು, ವಸ್ತು ಮತ್ತು ಸೇವೆಯನ್ನು ಹಣ ಕೊಟ್ಟು ಕೊಳ್ಳುವಾಗ ನಮ್ಮ ಹಣ ವ್ಯರ್ಥ ಆಗಬಾರದು, ಅದರ ರಕ್ಷಣೆ ಜವಾಬ್ದಾರಿ ಈ ಕಾಯ್ದೆಯ ಅಡಿಯಲ್ಲಿದೆ. ಸುರಕ್ಷತೆಯ ಹಕ್ಕು, ಗ್ರಾಹಕರ ಶಿಕ್ಷಣದ ಹಕ್ಕು, ಮಾಹಿತಿ ನೀಡುವ ಹಕ್ಕುಗಳನ್ನು ಈ ಕಾಯ್ದೆ ಒಳಗೊಂಡಿದೆ, ವಸ್ತುಗಳನ್ನು ಪಡೆಯುವಾಗ ಎಚ್ಚರ ಇರಬೇಕು, ಹಣ, ಜಾತಿ ತಾರತಮ್ಯ ಕಾನೂನಿಗೆ ಇಲ್ಲ, ಇಲ್ಲಿ ಎಲ್ಲರೂ ಸಮಾನರು, ನ್ಯಾಯ ದೊರಕಬೇಕೆಂಬ ನಿಟ್ಟಿನಲ್ಲಿ ಕಾನೂನು ಸೇವಾ ಪ್ರಾಧಿಕಾರ ಕೆಲಸ ಮಾಡುತ್ತಿದೆ ಎಂದು ತಿಳಿಸಿದರು.

ಪ್ರಾಂಶುಪಾಲರಾದ ಶ್ರೀ ಕೆ.ಎಸ್. ಮರಿಸ್ವಾಮಿಯವರು ಗ್ರಾಹಕರ ಕಾನೂನಿನ ಅರಿವನ್ನು ಪಡೆದುಕೊಂಡು, ವ್ಯಾಪಾರದಲ್ಲಿ ಉಂಟಾಗುವ ಲೋಪದೋಷಗಳನ್ನು ಸರಿಪಡಿಸಿಕೊಂಡು, ಉತ್ತಮ ವಸ್ತು ಪಡೆಯುವ ವ್ಯಾಪಾರದಲ್ಲಿ ನ್ಯಾಯ ಹೊಂದುವ ಮೂಲಕ ವ್ಯಾಪಾರ ವ್ಯವಹಾರ ಕ್ಷೇತ್ರವನ್ನು ಶುದ್ಧವಾಗಿಟ್ಟುಕೊಳ್ಳಬಹುದು ಎಂದರು.

ಜಿಲ್ಲಾ ಗ್ರಾಹಕರ ಪರಿಹಾರ ಆಯೋಗದ ಸದಸ್ಯರಾದ ಶ್ರೀ ವೈ.ಎಸ್. ತಮ್ಮಣ್ಣರವರು ಯಾರೊಬ್ಬರೂ ಸಮಾಜದಲ್ಲಿ ಶೋಷಿತನಾಗಿ ಇರಬಾರದು ಮತ್ತು ದಬ್ಬಾಳಿಕೆಯನ್ನು ತಪ್ಪಿಸಬೇಕೆಂಬುದು ಈ ಕಾಯ್ದೆಯ ಉದ್ದೇಶ. ಗ್ರಾಹಕ ಸಾರ್ವಭೌಮ ಅನಪೇಕ್ಷಿತ ವ್ಯಕ್ತಿಯಲ್ಲ ಎಂಬ ಗಾಂಧೀಜಿಯವರ ಸಂದೇಶ ಇದನ್ನೇ ಹೇಳುತ್ತದೆ. ವ್ಯಕ್ತಿ ಯಾವುದೇ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸಲಿ ಆತನಿಗೆ ಕಾನೂನಿನ ಅರಿವು ಇರಬೇಕು. ಅರಿವು, ನೆರವು, ಇತ್ಯರ್ಥ ಈ ಮೂರು ಪ್ರಾಧಿಕಾರದ ಉದ್ದೇಶ ಎಂದು ತಿಳಿಸಿದರು.

ಚಾಮರಾಜನಗರ ಜಿಲ್ಲಾ ಗ್ರಾಹಕ ಮಾಹಿತಿ ಕೇಂದ್ರದ ಸಂಚಾಲಕರಾದ ಶ್ರೀಮತಿ ಶಿವರಾಜಮ್ಮ ಹಾಗೂ ಕಾನೂನು ಮಾಪನ ಶಾಸ್ತ್ರ ಇಲಾಖೆಯ ಸಹಾಯಕ ನಿಯಂತ್ರಕರಾದ ಶ್ರೀ ರಾಜೀವ್‌ರವರು ವೇದಿಕೆ ಮೇಲೆ ಉಪಸ್ಥಿತರಿದ್ದರು. ಕು. ಕುಮುದ ಮತ್ತು ತಂಡದವರು ಪ್ರಾರ್ಥಿಸಿದರು. ಆಹಾರ ನಾಗರಿಕ ಸರಬರಾಜು ಇಲಾಖೆಯ ಉಪನಿರ್ದೇಶಕರಾದ ಶ್ರೀ ಯೋಗಾನಂದರವರು ಸ್ವಾಗತಿಸಿದರು. ಶ್ರೀಮತಿ ಎಸ್. ಅಂಬಿಕಾದೇವಿ ಕಾರ್ಯಕ್ರಮವನ್ನು ನಿರೂಪಿಸಿದರು.

## ನಂಜನಗೂಡು ಜೆಎಸ್‌ಎಸ್ ಕಾಲೇಜಿನಲ್ಲಿ ಮಾನವ ಹಕ್ಕುಗಳ ದಿನಾಚರಣೆ

ವಿಶ್ವಸಂಸ್ಥೆಯು 10 ಡಿಸೆಂಬರ್ 1948ರಂದು ಮಾನವ ಹಕ್ಕುಗಳ ಸಾರ್ವತ್ರಿಕ ಘೋಷಣೆ ಮಾಡಿತು. ಇದರ ಜ್ಞಾಪಕಾರ್ಥವಾಗಿ ವಿಶ್ವದೆಲ್ಲೆಡೆ ಇಂದು ಮಾನವ ಹಕ್ಕುಗಳ ದಿನಾಚರಣೆಯನ್ನು ಆಚರಿಸಲಾಗುತ್ತದೆ. ಹುಟ್ಟಿನಿಂದಲೇ ಮಾನವನಲ್ಲಿ ಈ ಹಕ್ಕುಗಳು ಅಂತರ್ಗತವಾಗಿವೆ. ಆದ್ದರಿಂದಲೇ ಈ ಹಕ್ಕುಗಳನ್ನು ಮಾನವ ಹಕ್ಕುಗಳೆಂದು ಕರೆಯಲಾಗುತ್ತದೆ ಎಂದು ಜೆಎಸ್‌ಎಸ್ ಕಾನೂನು ಕಾಲೇಜಿನ ಪ್ರಾಂಶುಪಾಲರಾದ ಡಾ. ಎಸ್. ನಟರಾಜುರವರು ತಿಳಿಸಿದರು.

**ನಂಜನಗೂಡಿನ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ** ರಾಜ್ಯಶಾಸ್ತ್ರ ವಿಭಾಗ ಮತ್ತು ಐಕ್ಯುಎಸಿ ವತಿಯಿಂದ ದಿನಾಂಕ 10.12.2021ರಂದು ಆಯೋಜಿಸಿದ್ದ ಮಾನವ ಹಕ್ಕುಗಳ ದಿನಾಚರಣೆಯಲ್ಲಿ ಮಾತನಾಡುತ್ತಾ ವಿಶ್ವದ ಪ್ರತಿಯೊಬ್ಬ ಪ್ರಜೆಯೂ ಯಾವುದೇ ತಾರತಮ್ಯವಿಲ್ಲದೆ ಈ ಹಕ್ಕುಗಳನ್ನು ಅನುಭವಿಸಬಹುದು. ಈ ನಿಟ್ಟಿನಲ್ಲಿ ಭಾರತ ಸಂವಿಧಾನದ ಮೂರನೇ ಭಾಗದಲ್ಲಿರುವ ಮೂಲಭೂತ ಹಕ್ಕುಗಳ ಪಟ್ಟಿಯಲ್ಲಿ ಹಾಗೂ ನಾಲ್ಕನೇ ಭಾಗದಲ್ಲಿರುವ ರಾಜ್ಯ ನಿರ್ದೇಶಕತತ್ವಗಳಲ್ಲಿ ಮಾನವ ಹಕ್ಕುಗಳನ್ನು ಪ್ರಸ್ತಾಪಿಸಿರುವುದನ್ನು ಕಾಣಬಹುದು. ಕಾನೂನಿನ ಮುಂದೆ ಎಲ್ಲರೂ ಸಮಾನರು. ಪ್ರತಿಯೊಬ್ಬ ನಾಗರಿಕ, ರಾಜಕೀಯ ಹಾಗೂ ಸಾಮಾಜಿಕ ಹಕ್ಕುಗಳನ್ನು ಅನುಭವಿಸಲು ಅರ್ಹರಾಗಿರುತ್ತಾರೆ ಎಂದು ತಿಳಿಸಿದರು.

ಇತಿಹಾಸ ವಿಭಾಗದ ಮುಖ್ಯಸ್ಥರಾದ ಡಾ. ಮಹಾದೇವಮ್ಮ ಯಾವುದೇ ವ್ಯಕ್ತಿಯನ್ನು ಜನಾಂಗ, ವರ್ಣ, ಲಿಂಗ, ಭಾಷೆ, ಧರ್ಮ ಮೊದಲಾದವುಗಳ ಮೇಲೆ ತಾರತಮ್ಯ ಮಾಡದೆ ಎಲ್ಲರೂ ಈ ಹಕ್ಕುಗಳನ್ನು ಅನುಭವಿಸಲು ಅವಕಾಶ ಮಾಡಿಕೊಡಲಾಗಿದೆ. ಆದ್ದರಿಂದ ಪ್ರತಿಯೊಬ್ಬ ಮಾನವನನ್ನು ಮಾನವನಂತೆಯೇ ನಡೆಸಿಕೊಳ್ಳಬೇಕು. ಅಮಾನವೀಯ ಕೃತ್ಯಗಳನ್ನು ತಡೆದು ಮಾನವರೆಲ್ಲರೂ ಒಂದೇ ಎನ್ನುವ ಭಾವನೆಯನ್ನು ಉಂಟುಮಾಡಲು ಈ ಹಕ್ಕುಗಳು ಸಹಕಾರಿಯಾಗಿವೆ ಎಂದು ಹೇಳಿದರು.

ಶ್ರೀಮತಿ ಕಾವ್ಯಶ್ರೀ ಸ್ವಾಗತಿಸಿದರು. ಶ್ವೇತಾಶ್ರೀ ವಂದಿಸಿದರು. ಶ್ರೀಮತಿ ಬಿ. ರೂಪ ಕಾರ್ಯಕ್ರಮ ನಿರೂಪಿಸಿದರು.

## ಮಾನವ ಹಕ್ಕುಗಳ ರಕ್ಷಣೆ ಸಮಾಜದ ಜವಾಬ್ದಾರಿ

ಮಾನವ ಹಕ್ಕುಗಳ ರಕ್ಷಣೆ ಸಮಾಜದ ಜವಾಬ್ದಾರಿ ಎಂದು ಚಾಮರಾಜನಗರದ ಜಿಲ್ಲಾ ವಕೀಲರ ಸಂಘದ ಅಧ್ಯಕ್ಷರಾದ ಶ್ರೀ ಉಮ್ಮತ್ತೂರು ಇಂದುಶೇಖರ್‌ರವರು ಹೇಳಿದರು.

**ಚಾಮರಾಜನಗರದ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ** ದಿನಾಂಕ 11.12.2021ರಂದು ರಾಜ್ಯಶಾಸ್ತ್ರ ವಿಭಾಗದ ಕೌಟಿಲ್ಯ ಕ್ಲಬ್ ವತಿಯಿಂದ ಆಯೋಜಿಸಿದ್ದ ಮಾನವ ಹಕ್ಕುಗಳ ದಿನಾಚರಣೆಯ ಉದ್ಘಾಟನಾ ಕಾರ್ಯಕ್ರಮದಲ್ಲಿ ಮಾತನಾಡುತ್ತ ಸ್ವತಂತ್ರ ಪೂರ್ವದಲ್ಲಿ ಮಾನವ ಹಕ್ಕುಗಳಿದ್ದರೂ ಕೂಡ ಮಾನವನಿಗೆ ಲಭ್ಯವಾಗಿರಲಿಲ್ಲ. ಸ್ವಾತಂತ್ರ್ಯ ನಂತರ ವಿಶ್ವಸಂಸ್ಥೆ 1948 ಡಿಸೆಂಬರ್ 10 ರಂದು ಸಾರ್ವತ್ರಿಕ ಮಾನವ ಹಕ್ಕುಗಳ ಘೋಷಣೆಯನ್ನು ಹೊರಡಿಸುವುದರ ಮೂಲಕ ಮಾನವ ಹಕ್ಕುಗಳ ರಕ್ಷಣೆಯ ಅರಿವು ಮೂಡಿಸಲು ಮುಂದಾಯಿತು. ಇದರ ನೆನಪಿಗಾಗಿಯೇ ವಿಶ್ವದಾದ್ಯಂತ ಮಾನವಹಕ್ಕು ದಿನವನ್ನು ಆಚರಿಸಲಾಗುತ್ತಿದೆ. ಮಾನವನು ಸ್ವತಂತ್ರವಾಗಿ ಬದುಕಿದಾಗ ಮಾತ್ರ ಪ್ರಜಾಪ್ರಭುತ್ವ ಅರ್ಥಪೂರ್ಣವಾಗಿರಲು ಸಾಧ್ಯ. ಆದರೆ ಇಂದು ಮಾನವ ಹಕ್ಕಿನ ಉಲ್ಲಂಘನೆಯಾಗುತ್ತಿದ್ದು, ಅದನ್ನು ಕಾಪಾಡಿಕೊಳ್ಳುವುದು ನಮ್ಮೆಲ್ಲರ ಜವಾಬ್ದಾರಿಯಾಗಿರುವುದರಿಂದ ಮಾನವ ಹಕ್ಕುಗಳ ಅರಿವು ಅಗತ್ಯವೆಂದು ತಿಳಿಸಿದರು.

ವಕೀಲರಾದ ಶ್ರೀ ಆರ್. ಅರುಣ್‌ಕುಮಾರ್‌ರವರು ಮಾತನಾಡಿ ವಿಶ್ವಸಂಸ್ಥೆ ಪ್ರಕಟಿಸಿದ ಸಾರ್ವತ್ರಿಕ ಮಾನವ ಹಕ್ಕುಗಳ ಘೋಷಣೆಯಿಂದ ಪ್ರೇರಣೆ ಪಡೆದ ಭಾರತ ದೇಶದ ಸಂವಿಧಾನದ ರಚನಕಾರರು ಸಂವಿಧಾನದ ಪ್ರಸ್ತಾವನೆ ಸಹಿತ, ಅನುಚ್ಛೇದ 32 ಹಾಗೂ 226ರಲ್ಲಿ ಮಾನವ ಹಕ್ಕುಗಳ ರಕ್ಷಣೆ ಹಾಗೂ ಜಾರಿಗೊಳಿಸುವ ಜವಾಬ್ದಾರಿಯನ್ನು ನ್ಯಾಯಾಂಗಕ್ಕೆ ನೀಡಿದ್ದಾರೆ. 2021ರ ಘೋಷಾ ವಾಕ್ಯ ಸಮಾನತೆಗೆ ಸಂಬಂಧಿಸಿದ್ದಾಗಿದ್ದು, ದೇಶದಲ್ಲಿ ಅಸಮಾನತೆ ಕಡಿಮೆ ಮಾಡಿ, ಮಾನವ ಹಕ್ಕುಗಳನ್ನು ಮುನ್ನಡೆಸುವುದಾಗಿದೆ. ಸಮಾಜ ಸ್ವಾರ್ಥಿಗಳಿಂದ ತುಂಬಿಕೊಂಡು ಎಲ್ಲಾ ಕ್ಷೇತ್ರಗಳಲ್ಲಿ ಅಸಮಾನತೆ ತಾಂಡವವಾಡುತ್ತಿದೆ. ಆಸ್ಟ್ರೇಲಿಯಾ, ಅಮೆರಿಕಾ, ಫ್ರಾನ್ಸ್, ನ್ಯೂಜಿಲ್ಯಾಂಡ್ ರಾಷ್ಟ್ರಗಳು ಮಾನವ ಹಕ್ಕುಗಳನ್ನು ಅನುಷ್ಠಾನಗೊಳಿಸಿ ಮೊದಲನೆ ಸ್ಥಾನದಲ್ಲಿದೆ. ವಿಶ್ವದ 165 ರಾಷ್ಟ್ರಗಳಲ್ಲಿ ಭಾರತದ ಸೂಚ್ಯಾಂಕ 111ನೇ ಸ್ಥಾನದಲ್ಲಿದ್ದು, ಪೂರ್ಣಪ್ರಮಾಣದಲ್ಲಿ ಮಾನವ ಹಕ್ಕುಗಳು ಅನುಷ್ಠಾನವಾಗದಿರುವುದು ವಿಷಾದನೀಯವಾಗಿದೆ. ರಾಷ್ಟ್ರೀಯ ಅಪರಾಧಗಳನ್ನು ದಾಖಲೆ ಮಾಡುವ ಸಂಸ್ಥೆಯಲ್ಲಿ ಪ್ರಸ್ತುತ 64,500 ಪ್ರಕರಣಗಳು ದಾಖಲಾಗಿ ಮಾನವನ ಹಕ್ಕುಗಳ ಉಲ್ಲಂಘನೆಯಾಗುತ್ತಿರುವುದು ಕಂಡುಬಂದಿದೆ. ಅವುಗಳ ಸಂರಕ್ಷಣೆಗಾಗಿ ರಾಷ್ಟ್ರ, ರಾಜ್ಯ, ಜಿಲ್ಲಾಮಟ್ಟದಲ್ಲಿ ಮಾನವ ಹಕ್ಕುಗಳ ಆಯೋಗವನ್ನು ಸ್ಥಾಪಿಸಲಾಗಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಆಂತರಿಕ ಗುಣಮಟ್ಟ ಖಾತರಿ ಸಮಿತಿಯ ಸಂಚಾಲಕರಾದ ಶ್ರೀಮತಿ ಬಿ. ರೇವಣಾಂಬರವರು ಪ್ರತಿಯೊಬ್ಬ ನಾಗರಿಕನ ಉತ್ತಮ ಜೀವನಕ್ಕೆ ಮಾನವ ಹಕ್ಕುಗಳು ಅವಶ್ಯಕವಾಗಿರುವುದರಿಂದ ಅವುಗಳ ಬಗ್ಗೆ ಜಾಗೃತನಾಗಬೇಕು. ಆಗ ಮಾತ್ರ ಸದೃಢ ಸಮಾಜ ನಿರ್ಮಾಣ ಸಾಧ್ಯವೆಂದು ಹೇಳಿದರು.

ರಸಾಯನಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಶ್ರೀ ಸಿದ್ಧರಾಜು ಪ್ರತಿಯೊಬ್ಬ ನಾಗರಿಕನು ಶಿಕ್ಷಿತನಾಗಿ ಮಾನವ ಹಕ್ಕುಗಳ ಬಗ್ಗೆ ಅರಿವು ಹೊಂದಿದಾಗ ಅವುಗಳ ಉಲ್ಲಂಘನೆಯಾಗುವುದನ್ನು ಕಡಿಮೆ ಮಾಡಬಹುದು. ಇಂದು ಇದರ ಉಲ್ಲಂಘನೆಗೆ ವ್ಯಕ್ತಿಯ ದುರಾಸೆಯೇ ಕಾರಣ. ಸಾಮಾಜಿಕ ನ್ಯಾಯಯುಕ್ತ ಸಮಾಜವನ್ನು ನಿರ್ಮಿಸಲು ಹಕ್ಕುಗಳ ಜೊತೆಗೆ ಕರ್ತವ್ಯಗಳನ್ನು ಪಾಲಿಸಬೇಕೆಂದು ವಿದ್ಯಾರ್ಥಿಗಳಿಗೆ ತಿಳಿಸಿದರು.

ಶ್ರೀಮತಿ ಎಸ್. ಬಿಂದುಶ್ರೀರವರು ಪ್ರಾರ್ಥಿಸಿದರು. ಡಾ. ಎ.ಆರ್. ಸುಷ್ಮ ಪ್ರಾಸ್ತಾವಿಕವಾಗಿ ಮಾತನಾಡಿ ಸ್ವಾಗತಿಸಿದರು. ಶ್ರೀ ಪಿ. ಮಹೇಶ್ ವಂದಿಸಿದರು. ಶ್ರೀಮತಿ ಎಲ್.ಎನ್. ಶುಭ ಕಾರ್ಯಕ್ರಮವನ್ನು ನಿರೂಪಿಸಿದರು.

## ನೈಜ ಪ್ರತಿಭೆ ಮಸುಕಾಗದಿರಲಿ

ವಿದ್ಯಾರ್ಥಿಗಳಲ್ಲಿರುವ ನೈಜ ಪ್ರತಿಭೆ ಮಸುಕಾಗದಿರಲಿ ಎಂದು ಸಾರ್ವಜನಿಕ ಸಂಪರ್ಕಾಧಿಕಾರಿಗಳಾದ ಶ್ರೀ ಆರ್.ಎಂ. ಸ್ವಾಮಿಯವರು ಹೇಳಿದರು.

**ಚಾಮರಾಜನಗರದ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ** ದಿನಾಂಕ 2.12.2021 ರಂದು ನಡೆದ 2021–22ನೇ ಶೈಕ್ಷಣಿಕ ಸಾಲಿನ ಪ್ರತಿಭಾನ್ವೇಷಣಾ ದಿನಾಚರಣೆಯ ಉದ್ಘಾಟನಾ ಕಾರ್ಯಕ್ರಮದಲ್ಲಿ ಮಾತನಾಡುತ್ತಾ ಜೆಎಸ್‌ಎಸ್ ಸಂಸ್ಥೆಯು ವಿದ್ಯಾರ್ಥಿಗಳಿಗೆ ಗುಣಾತ್ಮಕ ಶಿಕ್ಷಣವನ್ನು ನೀಡುವುದರ ಜೊತೆಗೆ ವಿದ್ಯಾರ್ಥಿಗಳು ತಮ್ಮಲ್ಲಿರುವ ಸುಪ್ತ ಪ್ರತಿಭೆಯನ್ನು ಹೊರಹೊಮ್ಮಿಸಲು ತನ್ನದೇ ಆದಂತಹ ಪ್ರಯತ್ನವನ್ನು ಮಾಡುತ್ತಿದೆ. ನಿಜವಾದ ಪ್ರತಿಭೆಯಿರುವುದು ಗ್ರಾಮೀಣ ಭಾಗದಲ್ಲಿಯೇ. ನೀವು ಕೂಡ ನಿಮ್ಮ ಪ್ರತಿಭೆಗಳ ಮೂಲಕ ನಿಮ್ಮನ್ನು ಗುರುತಿಸಿಕೊಂಡು ನಿಮ್ಮ ಜೀವನವನ್ನು ರೂಪಿಸಿಕೊಳ್ಳಬೇಕು. ಯುವಜನತೆ, ಸಾಮಾಜಿಕ ಜಾಲತಾಣಗಳಾದ ವ್ಯಾಟ್ಸಪ್, ಫೇಸ್‌ಬುಕ್, ಯುಟ್ಯೂಬ್‌ಗಳತ್ತ ಗಮನಹರಿಸಿ ಭವಿಷ್ಯವನ್ನು ಹಾಳು ಮಾಡಿಕೊಳ್ಳುತ್ತಿದ್ದಾರೆ. ವಿದ್ಯಾರ್ಥಿಗಳು ಇಂಥ ದುರಂತಕ್ಕೆ ಒಳಗಾಗದೇ, ತಮ್ಮಲ್ಲಿ ಅಡಗಿರುವ ಪ್ರತಿಭೆಯನ್ನು ಧೈರ್ಯವಾಗಿ ಪ್ರದರ್ಶನ ಮಾಡಬೇಕು. ಪಠ್ಯೇತರ ಚಟುವಟಿಕೆಗಳತ್ತ ತಮ್ಮ ಚಿತ್ತಹರಿಸಬೇಕು. ಇಂದಿನ ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ಭಾಗವಹಿಸುತ್ತಿರುವ ಎಲ್ಲಾ ವಿದ್ಯಾರ್ಥಿನಿಯರಿಗೆ ಶುಭವಾಗಲಿ ಎಂದರು.

ಐಕ್ಯೂಎಸ್‌ಸಿ ಸಂಚಾಲಕರಾದ ಶ್ರೀಮತಿ ಬಿ. ರೇವಣಾಂಬ ಎಲ್ಲ ವಿದ್ಯಾರ್ಥಿನಿಯರಲ್ಲಿ ಪ್ರತಿಭೆಗಳು ಇರುತ್ತವೆ. ಆ ಪ್ರತಿಭೆ ಹೊರ ಹೊಮ್ಮಬೇಕಾದರೆ ಪಠ್ಯೇತರ ಚಟುವಟಿಕೆಗಳಲ್ಲಿ ಭಾಗವಹಿಸಿ ತಮ್ಮ ಪ್ರತಿಭೆಗಳನ್ನು ಅನಾವರಣಗೊಳಿಸಲು ಇಂತಹ ವೇದಿಕೆಯನ್ನು ಬಳಸಿಕೊಳ್ಳಬೇಕೆಂದು ತಿಳಿಸಿ ವಿದ್ಯಾರ್ಥಿನಿಯರಿಗೆ ಶುಭ ಕೋರಿದರು.

ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ಕೆ.ಎಸ್. ಮರಿಸ್ವಾಮಿ ಭಾರತದ ಸಂಸ್ಕೃತಿ ಶ್ರೀಮಂತವಾದುದು, ಕಲಾ ಪ್ರಕಾರಗಳಾದ ಸಾಹಿತ್ಯ, ಸಂಗೀತ, ನೃತ್ಯ, ಚಿತ್ರಕಲೆ ನಮ್ಮ ಸಂಸ್ಕೃತಿಯನ್ನು ಶ್ರೀಮಂತಗೊಳಿಸಿವೆ. ಸಂಗೀತ, ನೃತ್ಯ ಪ್ರಕಾರಗಳು ಮನರಂಜನೆಯ ಜೊತೆಗೆ ಮಾನಸಿಕ ಮತ್ತು ದೈಹಿಕ ಆರೋಗ್ಯಕ್ಕೆ ಕಾರಣವಾಗುತ್ತವೆ ಎಂದು ತಿಳಿಸಿದರು.

ಕು. ಎಂ. ಯಶೋಧ ಪ್ರಾರ್ಥಿಸಿದರು. ಡಾ. ಎ.ಆರ್. ಸುಷ್ಮ ಪ್ರಾಸ್ತಾವಿಕವಾಗಿ ಮಾತನಾಡಿ ಸ್ವಾಗತಿಸಿದರು. ಕು. ಸುಷ್ಮಿತಾ ಜಿ. ಶೆಟ್ಟಿ ವಂದಿಸಿದರು. ಕು. ಎಂ. ಮಧು ಕಾರ್ಯಕ್ರಮ ನಿರೂಪಿಸಿದರು.

## ಜಿಲ್ಲಾಮಟ್ಟದ ಸಿರಿಧಾನ್ಯಗಳ ಕಾರ್ಯಾಗಾರ ಹಾಗೂ ರಾಷ್ಟ್ರೀಯ ರೈತ ದಿನಾಚರಣೆ

ಜಿಲ್ಲಾ ಕೃಷಿ ಇಲಾಖೆ, ಸುತ್ತೂರು ಐಸಿಎಆರ್ ಜೆಎಸ್‌ಎಸ್ ಕೃಷಿ ವಿಜ್ಞಾನ ಕೇಂದ್ರ, ಜಿಲ್ಲಾ ಕೃಷಿಕ ಸಮಾಜ, ಕೃಷಿ ತಂತ್ರಜ್ಞರ ಸಂಸ್ಥೆ ಹಾಗೂ ದೀನ್‌ದಯಾಳ್ ಉಪಾಧ್ಯಾಯ್ ಕೌಶಲ್ ಕೇಂದ್ರ, ಊಟಿ ರಸ್ತೆಯ

ಜೆಎಸ್‌ಎಸ್ ಕಾಲೇಜುಗಳ ಸಹಯೋಗದೊಂದಿಗೆ ರಾಷ್ಟ್ರೀಯ ಆಹಾರ ಭದ್ರತಾ ಅಭಿಯಾನ-2021 ಯೋಜನೆಯಡಿ ಜಿಲ್ಲಾ ಮಟ್ಟದ ಸಿರಿಧಾನ್ಯಗಳ ಕಾರ್ಯಾಗಾರ ಮತ್ತು ವಸ್ತುಪ್ರದರ್ಶನ ಹಾಗೂ ರಾಷ್ಟ್ರೀಯ ರೈತ ದಿನಾಚರಣೆಗೆ ಮೈಸೂರಿನ ಊಟಿ ರಸ್ತೆಯ ಜೆಎಸ್‌ಎಸ್ ಕಾಲೇಜಿನಲ್ಲಿ ಚಾಲನೆ ನೀಡಲಾಯಿತು.

ಸಮಾರಂಭ ಉದ್ಘಾಟಿಸಿ ಮಾತನಾಡಿದ ಜಿಲ್ಲಾಧಿಕಾರಿಗಳಾದ ಡಾ. ಬಗಾದಿ ಗೌತಮ್‌ರವರು ಸಿರಿಧಾನ್ಯಗಳ ಅರಿವು ಎಲ್ಲರಿಗೂ ಇದೆ. ಆದರೆ ಸೂಕ್ತವಾದ ಮಾರುಕಟ್ಟೆ ಸಿಗುತ್ತಿಲ್ಲ. ಆದಕಾರಣ ಸಿರಿಧಾನ್ಯಗಳಿಗೆ ಉತ್ತಮ ಮಾರುಕಟ್ಟೆ ಸಿಗುವಂತಾಗಬೇಕು ಎಂದು ಅಭಿಪ್ರಾಯಪಟ್ಟರು.

ಬೆಂಗಳೂರಿನ ಐಸಿಎಆರ್ ಅಟಾರಿಯ ಪ್ರಧಾನ ವಿಜ್ಞಾನಿಗಳಾದ ಡಾ. ಬಿ.ಟಿ. ರಾಯಡುರವರು ಇತ್ತೀಚಿನ ದಿನಗಳಲ್ಲಿ ಮಾಲ್ ಸಂಸ್ಕೃತಿ ವ್ಯಾಪಕವಾಗಿದ್ದು ಎಲ್ಲಾ ಕಡೆ ಅನಾರೋಗ್ಯ ಹೆಚ್ಚಿಸುವ ಪಿಜ್ಜಾ ಹಾಗೂ ಬರ್ಗರ್‌ಗಳು ಸಿಗುತ್ತಿವೆ. ಆದರೆ ಆರೋಗ್ಯಕ್ಕೆ ಸೂಕ್ತವಾಗಿರುವ ಸಿರಿಧಾನ್ಯಗಳ ಲಭ್ಯತೆಯ ಕೊರತೆ ಇದೆ. ಸಿರಿಧಾನ್ಯಗಳ ಬೆಳೆಗಳು ಹಾಗೂ ಮೌಲ್ಯವರ್ಧನೆ ಕುರಿತು ಹೆಚ್ಚು ಪ್ರಚಾರವಾಗಬೇಕು ಎಂದು ತಿಳಿಸಿದರು.

ಕೃಷಿಕ ಸಮಾಜದ ಅಧ್ಯಕ್ಷರಾದ ಶ್ರೀ ಕಲ್ಮಳ್ಳಿ ಶಿವಕುಮಾರ್‌ರವರು ಭಾರತದ ಸ್ವಾತಂತ್ರ್ಯದ ನಂತರದ ಕಾಲಘಟ್ಟದಲ್ಲಿ ದೇಶದಲ್ಲಿ ಆಹಾರ ಕೊರತೆಯುಂಟಾಗಿತ್ತು. ಆದರೆ, ರೈತರು, ವಿಜ್ಞಾನಿಗಳು ಸಮಾಜದ ಎಲ್ಲಾ ವರ್ಗದವರ ಶ್ರಮದಿಂದಾಗಿ ಇಂದಿನ ದಿನಗಳಲ್ಲಿ ಆಹಾರಧಾನ್ಯವನ್ನು ರಫ್ತು ಮಾಡುವ ಸ್ಥಿತಿಗೆ ತಲುಪಿದ್ದೇವೆ. ಮುಂದಿನ ದಿನಗಳಲ್ಲಿ ಸಿರಿಧಾನ್ಯಗಳ ಕುರಿತು ರೈತರು ಹೆಚ್ಚಿನ ಮಾಹಿತಿ ಪಡೆದು; ಸಿರಿಧಾನ್ಯಗಳನ್ನು ಬೆಳೆದು ಸಶಕ್ತರಾಗುವಂತೆ ರೈತರಿಗೆ ಕರೆ ನೀಡಿದರು.

ಬೆಂಗಳೂರಿನ ಐಸಿಎಆರ್ ಅಟಾರಿಯ ಮುಖ್ಯ ತಾಂತ್ರಿಕ ಅಧಿಕಾರಿಯಾದ ಡಾ. ಮಲ್ಲಿಕಾರ್ಜುನ್ ಬಿ. ಹಂಜಿಯವರು ವಿಶ್ವದಲ್ಲಿ ಸಿರಿಧಾನ್ಯ ಬೆಳೆಯನ್ನು ಮುಂಚೂಣಿಯಲ್ಲಿ ಬೆಳೆಯುತ್ತಿರುವ ದೇಶವೆಂದರೆ ಭಾರತ, ನಂತರದ ಸ್ಥಾನದಲ್ಲಿ ಚೀನಾ ಇದೆ. ವಿಶ್ವದಾದ್ಯಂತ ಸಿರಿಧಾನ್ಯಗಳ ಉಪಯೋಗ ಶೇ. 40ರಷ್ಟು ಇದೆ. ಮುಂದಿನ ದಿನಗಳಲ್ಲಿ ಸಿರಿಧಾನ್ಯಗಳ ಬಳಕೆ ಹೆಚ್ಚಾಗುವ ಸಂಭವವಿದೆ, ಆದಕಾರಣ ಸಿರಿಧಾನ್ಯಗಳನ್ನು ಬೆಳೆಯಲು ರೈತರು ಹೆಚ್ಚು ಆಸಕ್ತಿ ತೋರಿಸಬೇಕೆಂದು ಹೇಳಿದರು.

ಮೈಸೂರಿನ ಕೃಷಿ ಇಲಾಖೆಯ ಜಂಟಿ ಕೃಷಿ ನಿರ್ದೇಶಕರಾದ ಡಾ. ಎಂ. ಮಹಾಂತೇಶಪ್ಪ ಕಡಿಮೆ ಫಲವತ್ತೆಯ ಭೂಮಿಯಲ್ಲಿ ಕಡಿಮೆ ಖರ್ಚಿನಲ್ಲಿ ಸಿರಿಧಾನ್ಯಗಳನ್ನು ಬೆಳೆಯಬಹುದಾಗಿದೆ. ಸಿರಿಧಾನ್ಯ ಬೆಳೆಯುವ ರೈತರಿಗೆ 10,000 ರೂ.ಗಳ ಸಹಾಯಧನವನ್ನು ಹಾಗೂ ಯುವ ರೈತರು, ಉದ್ಯಮಿಗಳಿಗೆ ಸಿರಿಧಾನ್ಯ ಸಂಸ್ಕರಣೆ ಯಂತ್ರಗಳನ್ನು ಸ್ಥಾಪಿಸಲಿಚ್ಛಿಸಿದ್ದಲ್ಲಿ 10 ಲಕ್ಷ ರೂ.ಗಳ ಸಹಾಯಧನವನ್ನು ಇಲಾಖೆ ವತಿಯಿಂದ ನೀಡಲಾಗುವುದು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ರಾಷ್ಟ್ರೀಯ ರೈತ ದಿನಾಚರಣೆಯ ಅಂಗವಾಗಿ 10 ಪ್ರಗತಿಪರ ರೈತರನ್ನು ಸನ್ಮಾನಿಸಲಾಯಿತು. ಡಾ. ಬಿ.ಎಸ್. ಸೌಮ್ಯಲತಾ, ಶ್ರೀ ಮಿಲ್ ನಾಗರಾಜು, ಶ್ರೀ ಹೊನ್ನೂರು ಪ್ರಕಾಶ್ ಹಾಗೂ ಶ್ರೀಮತಿ ಜಮುನಾ ಅರಸ್‌ರವರು ಸಿರಿಧಾನ್ಯ ಬೇಸಾಯ ಕ್ರಮಗಳು, ಮಾರುಕಟ್ಟೆ ಹಾಗೂ ಮೌಲ್ಯವರ್ಧನೆ ಕುರಿತು ತಾಂತ್ರಿಕ ಮಾಹಿತಿಯನ್ನು ನೀಡಿದರು.

ಕಾರ್ಯಕ್ರಮದಲ್ಲಿ ಜೆಎಸ್‌ಎಸ್ ಮಹಾವಿದ್ಯಾಪೀಠದ ತೋಟಗಾರಿಕೆ ನಿರ್ದೇಶಕರಾದ ಶ್ರೀ ಎನ್.ಎಂ. ಶಿವಶಂಕರಪ್ಪ, ಕಾಲೇಜಿನ ಮುಖ್ಯ ಕಾರ್ಯನಿರ್ವಾಹಕರಾದ ಪ್ರೊ. ಬಿ.ವಿ. ಸಾಂಬಶಿವಯ್ಯ ಹಾಗೂ ತೋಟಗಾರಿಕೆ ಇಲಾಖೆಯ ಉಪನಿರ್ದೇಶಕರಾದ ಶ್ರೀ ಕೆ. ರುದ್ರೇಶ್ ಉಪಸ್ಥಿತರಿದ್ದರು.

ಕೃಷಿ ಇಲಾಖೆಯ ಉಪನಿರ್ದೇಶಕರಾದ ಶ್ರೀ ಕೆ. ರಾಜು ಪ್ರಾಸ್ತಾವಿಕವಾಗಿ ಮಾತನಾಡಿದರು. ಕೆವಿಕೆಯ ಪ್ರಭಾರ ಹಿರಿಯ ವಿಜ್ಞಾನಿ ಹಾಗೂ ಮುಖ್ಯಸ್ಥರಾದ ಶ್ರೀಮತಿ ಹೆಚ್.ವಿ. ದಿವ್ಯಾ ಸ್ವಾಗತಿಸಿದರು. ನಾಗನಹಳ್ಳಿಯ ಜಿಲ್ಲಾ ಕೃಷಿ ತರಬೇತಿ ಕೇಂದ್ರದ ಉಪ ಕೃಷಿ ನಿರ್ದೇಶಕರಾದ ಶ್ರೀ ಜಿ.ಹೆಚ್. ಯೋಗೇಶ್ ವಂದಿಸಿದರು. ಶ್ರೀಮತಿ ನೇತ್ರಾವತಿ ಎತ್ತಿನಮನಿ ನಿರೂಪಿಸಿದರು.

## ನೈಸರ್ಗಿಕ ಕೃಷಿ ಸಮ್ಮೇಳನ ಹಾಗೂ ದೇಶಿ ತರಕಾರಿ ಬೀಜೋತ್ಪಾದನೆ ತರಬೇತಿ



ಸುತ್ತೂರಿನ ಐಸಿಎಆರ್ ಜೆಎಸ್‌ಎಸ್ ಕೃಷಿ ವಿಜ್ಞಾನ ಕೇಂದ್ರದಲ್ಲಿ ನೈಸರ್ಗಿಕ ಕೃಷಿ ಸಮ್ಮೇಳನ ಕುರಿತಾದ ಆನ್‌ಲೈನ್ ಕಾರ್ಯಕ್ರಮವನ್ನು ವೀಕ್ಷಿಸುತ್ತಿರುವ ರೈತರು, ವಿದ್ಯಾರ್ಥಿಗಳು ಹಾಗೂ ಸಿಬ್ಬಂದಿವರ್ಗದವರು

ಸುತ್ತೂರಿನ ಐಸಿಎಆರ್ ಜೆಎಸ್‌ಎಸ್ ಕೃಷಿ ವಿಜ್ಞಾನ ಕೇಂದ್ರದಲ್ಲಿ ದಿನಾಂಕ 16.12.2021 ರಂದು ನೈಸರ್ಗಿಕ ಕೃಷಿ ಸಮ್ಮೇಳನ ಕುರಿತಾದ ಆನ್ ಲೈನ್ ಕಾರ್ಯಕ್ರಮದ ವೀಕ್ಷಣೆ ಹಾಗೂ ದೇಶಿ ತರಕಾರಿ ಬೀಜೋತ್ಪಾದನೆ ಕುರಿತಾದ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಮೈಸೂರು ಜಿಲ್ಲಾ ಪಂಚಾಯಿತಿ ಸದಸ್ಯರಾದ ಶ್ರೀ ಸದಾನಂದರವರು ನೈಸರ್ಗಿಕ ಕೃಷಿ ಬಗ್ಗೆ ಮಾಹಿತಿ ನೀಡಿ, ಈ ಕಾರ್ಯಕ್ರಮದ ಸದುಪಯೋಗ ಪಡೆದುಕೊಳ್ಳಬೇಕೆಂದು ತಿಳಿಸಿದರು. ಕೇಂದ್ರದ ಕೃಷಿ ಸಚಿವರಾದ ಶ್ರೀ ನರೇಂದ್ರ ಸಿಂಗ್ ತೋಮರ್‌ರವರು ಪ್ರಧಾನಮಂತ್ರಿ ಕಿಸಾನ್ ಸಮ್ಮಾನ ಯೋಜನೆ, ಕಿಸಾನ್ ಕ್ರೆಡಿಟ್ ಕಾರ್ಡ್, ರೈತ ಉತ್ಪಾದಕ ಸಂಘಗಳು ಹಾಗೂ ಆತ್ಮನಿರ್ಭರ ಯೋಜನೆಗಳ ಬಗ್ಗೆ ಮಾಹಿತಿ ನೀಡುತ್ತಾ ನೈಸರ್ಗಿಕ ಕೃಷಿ ಅಳವಡಿಸಿಕೊಳ್ಳ ಬೇಕೆಂದು ರೈತರಿಗೆ ಕರೆ ನೀಡಿದರು. ಗೃಹ ಸಚಿವರಾದ ಶ್ರೀ ಅಮಿತ್ ಶಾರವರು ನೈಸರ್ಗಿಕ ಕೃಷಿ ಅಳವಡಿಸಿಕೊಳ್ಳು ವುದರಿಂದ ಖರ್ಚು ಕಡಿಮೆಯಾಗಿ, ಭೂಮಿಯ ಫಲವತ್ತತೆ ಹೆಚ್ಚಾಗಿ ಇಳುವರಿ ಹೆಚ್ಚಾಗುವುದು. ನೈಸರ್ಗಿಕ ಕೃಷಿ ಉತ್ಪನ್ನಗಳಿಗೆ ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಹೆಚ್ಚಿನ ಬೇಡಿಕೆಯಿದ್ದು ರೈತರು ನೈಸರ್ಗಿಕ ಕೃಷಿ ಮಾಡಬೇಕೆಂದು ಹೇಳಿದರು.

ಗುಜರಾತ್‌ನ ರಾಜ್ಯಪಾಲರಾದ ಶ್ರೀ ಆಚಾರ್ಯರವರು ನೈಸರ್ಗಿಕ ಕೃಷಿಯಲ್ಲಿನ ತಮ್ಮ ಅನುಭವಗಳನ್ನು ಹಂಚಿಕೊಳ್ಳುತ್ತಾ, ಯಾವುದೇ ರಾಸಾಯನಿಕಗಳನ್ನು ಬಳಸದೇ, ಜೀವಾಮೃತ, ಘನ ಜೀವಾಮೃತ, ನಿಮಾಸ್ತ್ರ, ಬೀಜಾಮೃತ ಇತ್ಯಾದಿ ಪದ್ಧತಿಗಳನ್ನು ಅಳವಡಿಸಿಕೊಂಡು ಭೂಮಿಯಲ್ಲಿನ ಸಾವಯವ ಇಂಗಾಲದ ಮಟ್ಟವನ್ನು ಹೆಚ್ಚಿಸಿಕೊಂಡು ಅತೀ ಕಡಿಮೆ ಖರ್ಚಿನಲ್ಲಿ ಅಧಿಕ ಇಳುವರಿ ಪಡೆಯುತ್ತಿರುವುದರ ಬಗ್ಗೆ ಮಾಹಿತಿ ನೀಡಿ, ಹೆಚ್ಚಿನ ರೈತರು ನೈಸರ್ಗಿಕ ಕೃಷಿಯನ್ನು ಅಳವಡಿಸಿಕೊಳ್ಳಲು ಪ್ರೇರಣೆ ನೀಡಿದರು. ಸನ್ಮಾನ್ಯ ಪ್ರಧಾನ ಮಂತ್ರಿಗಳಾದ ಶ್ರೀ ನರೇಂದ್ರ ಮೋದಿಯವರು ಮಾತನಾಡಿ ರೈತರು ರಾಜ್ಯಪಾಲರಾದ ಶ್ರೀ ಆಚಾರ್ಯರವರ ನೈಸರ್ಗಿಕ ಕೃಷಿಯ ಅನುಭವಗಳಿಂದ ಪ್ರೇರಿತರಾಗಿ ಜನಾಂದೋಲನ ರೀತಿಯಲ್ಲಿ ದೇಶದ ರೈತರು ನೈಸರ್ಗಿಕ ಕೃಷಿಯನ್ನು ಅಳವಡಿಸಿಕೊಂಡು ಮಣ್ಣನ್ನು

ರಾಸಾಯನಿಕ ಮುಕ್ತವನ್ನಾಗಿ ಮಾಡುವ ಪ್ರಯತ್ನ ಮಾಡಬೇಕು. ಜೊತೆಗೆ ದೇಶಿ ಹಸುಗಳ ಸಾಕಿ ಗೋವರ್ಧನದಿಂದ ಭಾರತ ಭೂಮಿಯನ್ನು ಸಂವರ್ಧನ ಮಾಡೋಣ ಎಂದು ರೈತರಿಗೆ ಉತ್ಸಾಹ ತುಂಬಿದರು.

ಜೆಎಸ್‌ಎಸ್ ಕೃಷಿ ವಿಜ್ಞಾನ ಕೇಂದ್ರದ ಪ್ರಭಾರ ಹಿರಿಯ ವಿಜ್ಞಾನಿ ಹಾಗೂ ಮುಖ್ಯಸ್ಥರಾದ ಶ್ರೀಮತಿ ಹೆಚ್.ವಿ. ದಿವ್ಯಾ ಈ ಕಾರ್ಯಕ್ರಮವನ್ನು ಕನ್ನಡಕ್ಕೆ ತರ್ಜುಮೆ ಮಾಡಿ ರೈತರಿಗೆ ವಿವರಿಸಿದರು.

ದೇಶಿ ತರಕಾರಿ ಬೀಜೋತ್ಪಾದನೆ ತರಬೇತಿಯಲ್ಲಿ ಮೈಸೂರು ಜಿಲ್ಲೆಯ ಪಿರಿಯಾಪಟ್ಟಣ ತಾಲ್ಲೂಕಿನ ಹಿಟ್ನೆ ಹೆಬ್ಬಾಗಿಲು ಗ್ರಾಮದ ಶ್ರೀ ಕಾಳಪ್ಪನವರು ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿ ತಾವು ಮಾಡುತ್ತಿರುವ ದೇಶಿ ತರಕಾರಿ ಬೀಜೋತ್ಪಾದನೆ ಹಾಗೂ ಬೆಳೆಗಳಿಗೆ ತಗಲುವ ರೋಗ ಹಾಗೂ ಕೀಟಗಳ ನಿರ್ವಹಣೆಗೆ ವಿವಿಧ ಸೊಪ್ಪುಗಳನ್ನು ಬಳಸಿ ತಯಾರಿಸುವ ಕಷಾಯಗಳ ಬಗ್ಗೆ ಮಾಹಿತಿ ನೀಡಿದರು. ಈ ಎರಡು ಕಾರ್ಯಕ್ರಮಗಳಲ್ಲಿ ಕೃಷಿ ಮಹಾವಿದ್ಯಾಲಯ, ವಿ.ಸಿ. ಫಾರಂ, ಮಂಡ್ಯ ವಿದ್ಯಾರ್ಥಿಗಳು, ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಯೋಜನೆಯ ಸ್ವಸಹಾಯ ಸಂಘದ ಮಹಿಳೆಯರು, ಸಿಬ್ಬಂದಿಗಳು, ಬಿಳಿಗೆರೆ ರೈತ ಸಂಪರ್ಕ ಕೇಂದ್ರದ ಸಿಬ್ಬಂದಿಗಳು, ಟಿವಿಎಸ್ ಸಿಬ್ಬಂದಿಗಳು, ಸುತ್ತೂರು, ಬಿಳಿಗೆರೆ ಹಾಗೂ ಇತರ ಗ್ರಾಮಗಳ ರೈತ, ರೈತ ಮಹಿಳೆಯರು ಮತ್ತು ಕೆವಿಕೆಯ ಸಿಬ್ಬಂದಿಗಳು ಭಾಗವಹಿಸಿದ್ದರು.

## ಐಸಿಎಆರ್ ಜೆಎಸ್‌ಎಸ್ ಕೃಷಿ ವಿಜ್ಞಾನ ಕೇಂದ್ರದ ವತಿಯಿಂದ ವಿವಿಧ ಕಾರ್ಯಕ್ರಮಗಳು

ಜೆಎಸ್‌ಎಸ್ ಕೃಷಿ ವಿಜ್ಞಾನ ಕೇಂದ್ರದ ವತಿಯಿಂದ ನಂಜನಗೂಡು ತಾಲ್ಲೂಕಿನ ಹಂಡುವಿನಹಳ್ಳಿ ಗ್ರಾಮದಲ್ಲಿ ಬಾಳೆ ಮತ್ತು ತರಕಾರಿ ಬೆಳೆಗಳಲ್ಲಿ ಪೋಷಕಾಂಶಗಳ ನಿರ್ವಹಣೆ ಬಗ್ಗೆ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ ಕೃಷಿ ವಿಜ್ಞಾನ ಕೇಂದ್ರದ ತೋಟಗಾರಿಕಾ ವಿಜ್ಞಾನಿಯಾದ ಡಾ. ಜಿ.ಎಂ. ವಿನಯ್‌ರವರು ಪೋಷಕಾಂಶಗಳ ಸಮಗ್ರ ನಿರ್ವಹಣೆ ಬಗ್ಗೆ ವಿವರವಾಗಿ ತಿಳಿಸಿ ರೈತರಿಗೆ ಮಾಹಿತಿ ನೀಡಿದರು.

ಮೈಕ್ರೋನ್ಯೂಟ್ರಿಯಂಟ್ ಸಂಸ್ಥೆಯ ಶ್ರೀ ಜಿ. ರಾಘವೇಂದ್ರರವರು ಪೋಷಕಾಂಶಗಳ ನಿರ್ವಹಣೆ ಬಗ್ಗೆ ತಿಳಿಸಿದರು.

ಈ ತರಬೇತಿ ಕಾರ್ಯಕ್ರಮದಲ್ಲಿ ಟಿವಿಎಸ್ ಕಂಪೆನಿ ಮತ್ತು ಮೈಕ್ರೋನ್ಯೂಟ್ರಿಯಂಟ್ಸ್ ಸಂಸ್ಥೆಯ ಸಿಬ್ಬಂದಿವರ್ಗದವರು ಮತ್ತು ಹಂಡುವಿನಹಳ್ಳಿ ಗ್ರಾಮದ ಸುಮಾರು ನಲವತ್ತೈದು ರೈತರು ಭಾಗವಹಿಸಿ ಉಪಯೋಗ ಪಡೆದುಕೊಂಡರು.

* * *

ದಿನಾಂಕ 7.12.2021ರಂದು ಹೆಚ್.ಡಿ. ಕೋಟೆ ತಾಲ್ಲೂಕಿನ ಮಾಗುಡಿಲು ಗ್ರಾಮದಲ್ಲಿ ಭತ್ತ, ಉದ್ದು ಹಾಗೂ ಅಲಸಂದೆ ಬೆಳೆಗಳ ಕ್ಷೇತ್ರೋತ್ಸವವನ್ನು ತಂತ್ರಜ್ಞಾನ ಸಪ್ತಾಹದ ಅಂಗವಾಗಿ ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮ ಉದ್ಘಾಟಿಸಿದ ಮಾಗುಡಿಲು ಗ್ರಾಮದ ಪ್ರಗತಿಪರ ರೈತರಾದ ಶ್ರೀ ಚನ್ನಬಸಪ್ಪನವರು ಬೀಜೋಪಚಾರ ಹಾಗೂ ಡ್ರಂಸೀಡರ್ ಬಳಕೆಯಿಂದ ಭತ್ತದ ವೆಚ್ಚ ಕಡಿಮೆಯಾಗಿ ಲಾಭದತ್ತ ಮುಖ ಮಾಡಿದ್ದೇವೆಂದು ತಿಳಿಸಿದರು.

ಹೆಚ್.ಡಿ. ಕೋಟೆಯ ಕೃಷಿ ಇಲಾಖೆಯ ಸಹಾಯಕ ಕೃಷಿ ನಿರ್ದೇಶಕರಾದ ಶ್ರೀ ರಂಗಸ್ವಾಮಿಯವರು ವರ್ಷಗಳ ಕಾಲ ಒಂದೇ ತಳಿಯನ್ನು ಬೆಳೆಯುವುದರಿಂದ ರೋಗ–ರುಜನೆಗಳು ಹೆಚ್ಚುತ್ತವೆ. ಕೃಷಿ ಇಲಾಖೆ ಹಾಗೂ ಸಂಶೋಧನಾ ಸಂಸ್ಥೆಯವರೊಂದಿಗೆ ಸಂಪರ್ಕವಿಟ್ಟುಕೊಂಡು ಹೊಸ ಭತ್ತದ ತಳಿಗಳನ್ನು ಬೆಳೆಯುವುದರಿಂದ ಹೆಚ್ಚಿನ ಇಳುವರಿಯನ್ನು ಪಡೆಯಬಹುದಾಗಿದೆ ಎಂದು ತಿಳಿಸಿದರು.

ಮಂಡ್ಯ ಜಿಲ್ಲೆಯ ವಲಯ ಕೃಷಿ ಸಂಶೋಧನಾ ಕೇಂದ್ರ ವಿ.ಸಿ. ಫಾರಂನ ತಳಿ ಸಂಶೋಧಕರಾದ ಡಾ. ಸಿ.ಎ. ದೀಪಕ್‌ರವರು ಮಾತನಾಡಿ ಹೊಸ ಭತ್ತದ ತಳಿ ಕೆಎಂಪಿ 220; ಜ್ಯೋತಿ ತಳಿಗೆ ಪರ್ಯಾಯವಾಗಿ




ಹೆಚ್.ಡಿ. ಕೋಟೆ ತಾಲ್ಲೂಕಿನ ಮಾಗುಡಿಲು ಗ್ರಾಮದಲ್ಲಿ ಭತ್ತ, ಉದ್ದು ಹಾಗೂ ಅಲಸಂದೆ ಬೆಳೆಗಳ ಕ್ಷೇತ್ರೋತ್ಸವವನ್ನು ಉದ್ಘಾಟಿಸಲಾಯಿತು. ಚಿತ್ರದಲ್ಲಿ ತಳಿ ಸಂಶೋಧಕರು, ಕೃಷಿ ಇಲಾಖೆಯ ಅಧಿಕಾರಿಗಳು, ಕೆವಿಕೆಯ ಸಿಬ್ಬಂದಿವರ್ಗದವರು ಹಾಗೂ ರೈತರನ್ನು ಕಾಣಬಹುದಾಗಿದೆ

ಅಭಿವೃದ್ಧಿಪಡಿಸಲಾಗಿದೆ ಹಾಗೂ ಬೆಂಕಿ ರೋಗನಿರೋಧಕ ಶಕ್ತಿಯನ್ನು ಹೊಂದಿದೆ. ಅಲ್ಲದೇ ಮತ್ತೊಂದು ತಳಿಯಾದ ಎಂಎಸ್‌ಎನ್99 ಸಣ್ಣ ಭತ್ತವಾಗಿದ್ದು ಹೆಚ್ಚಿನ ಇಳುವರಿ ನೀಡುವುದರೊಂದಿಗೆ ಮಾರುಕಟ್ಟೆಯಲ್ಲಿ ಉತ್ತಮ ಬೆಲೆಯನ್ನು ಪಡೆಯಬಹುದಾಗಿದೆ ಎಂದರು.

ಕೆವಿಕೆಯ ಪ್ರಭಾರ ಮುಖ್ಯಸ್ಥರಾದ ಶ್ರೀಮತಿ ದಿವ್ಯಾರವರು ಉದ್ದು (ಎಲ್‌ಬಿಜಿ 791) ಹಾಗೂ ಅಲಸಂದೆ (ಕೆಬಿಸಿ 9) ತಳಿಗಳ ಕುರಿತು ಮಾಹಿತಿ ನೀಡಿದರು. ಶ್ರೀ ಶಾಮರಾಜು ಕಾರ್ಯಕ್ರಮ ನಿರೂಪಿಸಿದರು. ಶ್ರೀ ಜೆ.ಜಿ. ರಾಜಣ್ಣ ವಂದಿಸಿದರು.

* * *

ನಂಜನಗೂಡು ತಾಲೂಕಿನ ಕುಪ್ಪರವಳ್ಳಿ ಗ್ರಾಮದಲ್ಲಿ ಅರಿಶಿಣ ಬೆಳೆ ಕ್ಷೇತ್ರೋತ್ಸವವನ್ನು ತಂತ್ರಜ್ಞಾನ ಸಪ್ತಾಹದ ಐದನೇ ದಿನದ ಅಂಗವಾಗಿ ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮದಲ್ಲಿ ಅರಿಶಿಣ ಬೆಳೆಯಲ್ಲಿ ಉತ್ತಮ ಇಳುವರಿ ನೀಡುವಂತಹ ಭಾರತೀಯ ಸಾಂಬಾರು ಬೆಳೆಗಳ ಸಂಶೋಧನಾ ಸಂಸ್ಥೆಯಿಂದ ಬಿಡುಗಡೆಯಾಗಿರುವ ಪ್ರತಿಭಾ ತಳಿಯ ಪರಿಚಯವನ್ನು ರೈತರಿಗೆ ಕ್ಷೇತ್ರ ಭೇಟಿ ಮಾಡಿಸಿ ಮಾಹಿತಿ ನೀಡಲಾಯಿತು.

ಕೃಷಿ ವಿಜ್ಞಾನ ಕೇಂದ್ರದ ಪ್ರಭಾರ ಹಿರಿಯ ವಿಜ್ಞಾನಿ ಮತ್ತು ಮುಖ್ಯಸ್ಥರಾದ ಶ್ರೀಮತಿ ದಿವ್ಯಾರವರು ಕೃಷಿ ವಿಜ್ಞಾನ ಕೇಂದ್ರದ ಕಾರ್ಯಕ್ರಮಗಳ ಬಗ್ಗೆ ಹಾಗೂ ತಂತ್ರಜ್ಞಾನ ಸಪ್ತಾಹದ ಬಗ್ಗೆ ರೈತರಿಗೆ ವಿವರವಾಗಿ ತಿಳಿಸಿದರು. ಕೃಷಿ ವಿಜ್ಞಾನ ಕೇಂದ್ರದ ಫಾರಂ ಮ್ಯಾನೇಜರ್ ಗಂಗಪ್ಪ ಹಿಪ್ಪರಗಿರವರು ಅರಿಷಿಣ ಬೆಳೆಯನ್ನು ಬೆಳೆಯುವ ಬಗ್ಗೆ ಸಂಕ್ಷಿಪ್ತವಾಗಿ ತಿಳಿಸಿದರು.

ಕೃಷಿ ವಿಜ್ಞಾನ ಕೇಂದ್ರದ ತೋಟಗಾರಿಕಾ ವಿಜ್ಞಾನಿಗಳಾದ ಡಾ. ಜಿ.ಎಂ. ವಿನಯ್ ಪ್ರತಿಭಾ ತಳಿಯ ಗುಣಲಕ್ಷಣಗಳ ಬಗ್ಗೆ ಸಂಪೂರ್ಣ ಮಾಹಿತಿಯನ್ನು ರೈತರಿಗೆ ತಿಳಿಸಿಕೊಟ್ಟರು. ಜೊತೆಗೆ ಹೆಚ್ಚು ಇಳುವರಿ ನೀಡುವ ಭಾರತೀಯ ಸಾಂಬಾರು ಬೆಳೆಗಳ ಸಂಶೋಧನಾ ಸಂಸ್ಥೆಯಿಂದ ಬಿಡುಗಡೆಯಾಗಿರುವ ಪ್ರಭ, ಕೇದಾರಮ್, ಅಲಿಪಿ ಸುಪ್ರೀಮ್ ಮತ್ತು ಅತಿ ಹೆಚ್ಚು ಇಳುವರಿ ನೀಡುವ ಪ್ರತಿಭಾ ತಳಿಗಳನ್ನು ಸಮಗ್ರ ಬೆಳೆಗಳ ನಿಯಂತ್ರಣದಿಂದ ಬೆಳೆಯುವುದರ ಮೂಲಕ ರೈತರು ಹೆಚ್ಚು ಇಳುವರಿ ಪಡೆದು ಲಾಭ ಪಡೆಯಬಹುದು ಎಂದು ತಿಳಿಸಿದರು. ನಂತರ ಬೇಸಾಯಶಾಸ್ತ್ರದ ವಿಜ್ಞಾನಿ ಶಾಮರಾಜ್‌ರವರು




ಸುತ್ತೂರು ಕೆವಿಕೆಯಲ್ಲಿ ಭಾರತೀಯ ಸಾಂಬಾರು ಬೆಳೆಗಳ ಸಂಶೋಧನಾ ಸಂಸ್ಥೆಯಿಂದ ಬಿಡುಗಡೆಯಾಗಿರುವ ಅರಿಶಿನ ತಳಿಯ ಪ್ರತಿಭಾ ಕ್ಷೇತ್ರೋತ್ಸವವನ್ನು ಹಮ್ಮಿಕೊಳ್ಳಲಾಗಿತ್ತು

ಕೆವಿಕೆಯ ಇತರೆ ಕಾರ್ಯಕ್ರಮಗಳ ಬಗ್ಗೆ ರೈತರಿಗೆ ತಿಳಿಸಿದರು.

ಈ ಕಾರ್ಯಕ್ರಮದಲ್ಲಿ ಕೃಷಿ ವಿಜ್ಞಾನ ಕೇಂದ್ರದ ರಾಜಣ್ಣ, ಪಶು ವಿಜ್ಞಾನಿ ಡಾ. ರಕ್ಷಿತ್ ರಾಜ್ ಮತ್ತು ಸಿಬ್ಬಂದಿ ಹಾಜರಿದ್ದರು. ಸುಮಾರು ನಲ್ವತ್ತಕ್ಕೂ ಹೆಚ್ಚು ರೈತರು ಮತ್ತು ರೈತ ಮಹಿಳೆಯರು ಭಾಗವಹಿಸಿ ಕಾರ್ಯಕ್ರಮದ ಸದುಪಯೋಗವನ್ನು ಪಡೆದುಕೊಂಡರು. □

* * *

ಹೆಚ್.ಡಿ. ಕೋಟೆ ತಾಲ್ಲೂಕಿನ ಮಾಗುಡಿಲು ಗ್ರಾಮದ ರೈತರು ಮತ್ತು ರೈತ ಮಹಿಳೆಯರಿಗೆ ಬರಗಾಲದಲ್ಲಿ ಹಸಿರು ಮೇವು ಕೊರತೆ ನೀಗಿಸುವ ರಸಮೇವು ಉತ್ಪಾದನೆ ಬಗ್ಗೆ ತರಬೇತಿ ನೀಡಿ ಜೊತೆಗೆ ಅಜೋಲ್ಲಾ ಪಶು ಆಹಾರ ಕುರಿತು ಕ್ಷೇತ್ರೋತ್ಸವವನ್ನು ಆಚರಿಸಲಾಯಿತು.

ಐಸಿಎಆರ್ ಜೆಎಸ್‌ಎಸ್ ಕೃಷಿ ವಿಜ್ಞಾನ ಕೇಂದ್ರದ ಪಶು ವಿಜ್ಞಾನಿಗಳಾದ ಡಾ. ಯು.ಎಂ. ರಕ್ಷಿತ್ ರಾಜ್ ರಸಮೇವಿನ ಪ್ರಾಮುಖ್ಯತೆ ಬಗ್ಗೆ ತಿಳಿಸಿದರು. ನಮ್ಮ ದೇಶದಲ್ಲಿ ಸುಮಾರು 65% ರಷ್ಟು ಹಸಿರು ಮೇವಿನ ಮತ್ತು 24% ರಷ್ಟು ಒಣ ಮೇವಿನ ಕೊರತೆ ಇದೆ. ಬೇಸಿಗೆಯಲ್ಲಿ ಮತ್ತು ಬರಗಾಲದಂತಹ ಕಾಲದಲ್ಲಿ ಜಾನುವಾರುಗಳಿಗೆ ಮೇವು ಒದಗಿಸುವುದು ಬಹಳಷ್ಟು ಕಷ್ಟವಾಗಿದೆ. ಇಂತಹ ಮೇವಿನ ಸಮಸ್ಯೆಯನ್ನು ಬಗೆಹರಿಸಲು ರೈತರು ಮಳೆಗಾಲದಲ್ಲಿ ಯಥೇಚ್ಛವಾಗಿ ಸಿಗುವ ಮೇವಿನ ಜೋಳವನ್ನು ಕತ್ತರಿಸಿ, ರಸಮೇವನ್ನು ತಯಾರಿಸಿಬೇಕು. ಇಂತಹ ಶೇಖರಿಸಿಟ್ಟ ಮೇವನ್ನು ಎರಡು ತಿಂಗಳ ನಂತರ ಸುಮಾರು 8 ತಿಂಗಳವರೆಗೆ ಉಪಯೋಗಿಸಬಹುದು ಮತ್ತು ಎಲ್ಲಾ ವರ್ತಮಾನದಲ್ಲೂ ಬಳಸಬಹುದು ಜೊತೆಗೆ ದೀರ್ಘಕಾಲದ ಮೇವಿನ ಕೊರತೆ ಸಮಸ್ಯೆಯನ್ನು ತಡೆಯಬಹುದು. ಹೈನುಗಾರಿಕೆಯಲ್ಲಿ ಇಂದು ಮುಖ್ಯವಾಗಿ ಹಾಲಿನಲ್ಲಿ ಕಡಿಮೆ ಕೊಬ್ಬಿನಾಂಶ ಕಂಡುಬರುತ್ತಿದೆ. ಈ ಸಮಸ್ಯೆಯನ್ನು ಬಗೆಹರಿಸುವ ಸಲುವಾಗಿ ಕೇಂದ್ರವು ಸುಮಾರು 10 ರೈತರಿಗೆ ಅಜೋಲ್ಲಾ ಬೆಳೆಯಲು ಬೇಕಾಗಿರುವ ಸಾಮಗ್ರಿಗಳನ್ನು ನೀಡಿ ಬೆಳೆಯುವ ವಿಧಾನವನ್ನು ತೋರಿಸಿಕೊಡಲಾಗಿತ್ತು. ರೈತರು ಅಜೋಲ್ಲಾವನ್ನು ಚೆನ್ನಾಗಿ ಬೆಳೆದಿದ್ದಾರೆ. ಅದರ ಅಂಗವಾಗಿ ಇತರ ರೈತರಿಗೆ ಈ ತಂತ್ರಜ್ಞಾನವನ್ನು ಪರಿಚಯಿಸಲು ಕ್ಷೇತ್ರೋತ್ಸವವನ್ನು ಏರ್ಪಡಿಸಲಾಗಿದೆ ಎಂದು ತಿಳಿಸಿದರು.

ಗ್ರಾಮದ ರೈತರಾದ ನಾಗರಾಜು ಮಾತನಾಡಿ ಅಜೋಲ್ಲಾವನ್ನು ಪಶು ಆಹಾರವಾಗಿ ಬಳಸಲು ಶುರು ಮಾಡಿದ ನಂತರದಲ್ಲಿ ಹಾಲಿನಲ್ಲಿ ಕೊಬ್ಬಿನಾಂಶ ಸುಮಾರು 3.3 ರಿಂದ ಸುಮಾರು 3.8 ರವರೆಗೆ ಏರಿಕೆ ಕಂಡುಬಂದಿದೆ, ಹಾಲಿನ ಇಳುವರಿಯಲ್ಲೂ ಕೂಡ ಸುಮಾರು 10% ರಿಂದ 15% ರಷ್ಟು ಏರಿಕೆ ಬಂದಿದೆ: ಜೊತೆಗೆ ಹಸುಗಳ



ಸುತ್ತೂರಿನ ಐಸಿಎಆರ್ ಜೆಎಸ್‌ಎಸ್ ಕೃಷಿ ವಿಜ್ಞಾನ ಕೇಂದ್ರದಿಂದ ಹೆಚ್.ಡಿ. ಕೋಟೆ ತಾಲ್ಲೂಕಿನ ಮಾಗುಡಿಲು ಗ್ರಾಮದಲ್ಲಿ ಅಜೋಲ್ಲಾ ಪಶು ಆಹಾರದ ಕುರಿತು ಮಾಹಿತಿ ನೀಡಲಾಯಿತು

ಆರೋಗ್ಯದಲ್ಲಿ ಬಹಳಷ್ಟು ಚೇತರಿಕೆ ಕಾಣಿಸಿಕೊಂಡಿದೆ ಎಂದು ಸಂತೋಷ ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ರೈತ ಮುಖಂಡರುಗಳಾದ ಶ್ರೀ ಎಂ.ಕೆ. ನಾಗರಾಜು, ಶ್ರೀ ರವಿ, ಶ್ರೀ ಧನಂಜಯ, ಶ್ರೀ ಶಿವನಂಜೇಗೌಡ್ರು, ಶ್ರೀ ಮುದ್ದಪ್ಪನವರು, ಶ್ರೀ ಮಂಜುನಾಥ್, ಶ್ರೀ ಶಂಕರಲಿಂಗಪ್ಪ ಮತ್ತು ಗ್ರಾಮಸ್ಥರು ಭಾಗವಹಿಸಿದ್ದರು.

* * *

ದಿನಾಂಕ 17.12.2021 ರಂದು ಟಿ. ನರಸೀಪುರ ತಾಲ್ಲೂಕಿನ ವಾಟಾಳು ಗ್ರಾಮದಲ್ಲಿ ಭತ್ತ (ಕೆಎಂಪಿ 225) ಬೆಳೆಯ ಕ್ಷೇತ್ರೋತ್ಸವವನ್ನು ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮ ಉದ್ಘಾಟಿಸಿ ವಾಟಾಳು ಶ್ರೀ ಸೂರ್ಯ ಸಿಂಹಾಸನ ಮಠದ ಶ್ರೀ ಶಿವಕುಮಾರಸ್ವಾಮಿಯವರು ಮಾತನಾಡಿ ಕೆವಿಕೆ ಕಾರ್ಯಕ್ರಮ ಹಾಗೂ ಕೃಷಿ ಕುರಿತ ಇನ್ನಿತರ ಕಾರ್ಯಕ್ರಮಗಳಲ್ಲಿ ರೈತರು ಭಾಗವಹಿಸಿ ಪ್ರಯೋಜನ ಪಡೆದುಕೊಳ್ಳಬೇಕು ಎಂದು ಸೂಚಿಸಿದರು.

ಮಂಡ್ಯ ಜಿಲ್ಲೆಯ ವಲಯ ಕೃಷಿ ಸಂಶೋಧನಾ ಕೇಂದ್ರ ವಿ.ಸಿ. ಫಾರಂನ ತಳಿ ಸಂಶೋಧಕರಾದ ಡಾ. ಸಿ.ಎ. ದೀಪಕ್‌ರವರು ಮಾತನಾಡಿ ಕರ್ನಾಟಕದಲ್ಲಿ ಐಆರ್ 64 ತಳಿಯು ಮೆಗಾ ತಳಿಯಾಗಿದೆ. ಸುಮಾರು 50 ಸಾವಿರ ಕ್ವಿಂಟಾಲ್ ಬಿತ್ತನೆ ಪ್ರತಿ ವರ್ಷ ಖಾಲಿಯಾಗುತ್ತಿದೆ. ಆದರೆ, ಅದಕ್ಕೆ ಹೆಚ್ಚಿನ ರೋಗ ಬರುವುದರಿಂದ ರೈತರು ರೋಗ ನಿರೋಧಕ ತಳಿಯನ್ನು ಕೇಳುತ್ತಿದ್ದರು. ಆದ್ದರಿಂದ ಹೊಸ ಭತ್ತದ ತಳಿ ಕೆಎಂಪಿ 225; ಐಆರ್ 64 ತಳಿಗೆ ಪರ್ಯಾಯವಾಗಿ ಅಭಿವೃದ್ಧಿಪಡಿಸಲಾಗಿದೆ ಹಾಗೂ ಬೆಂಕಿ ರೋಗ, ಕುತ್ತಿಗೆ ಬೆಂಕಿ ರೋಗ ನಿರೋಧಕ ಶಕ್ತಿಯನ್ನು ಹೊಂದಿದೆ ಎಂದು ತಿಳಿಸಿದರು.

ಕೆವಿಕೆಯ ಬೇಸಾಯ ಶಾಸ್ತ್ರದ ವಿಜ್ಞಾನಿಗಳಾದ ಶ್ರೀ ಶಾಮರಾಜ್‌ರವರು ಮಾತನಾಡಿ ಉತ್ತಮ ತಳಿ ಹಾಗೂ ಸುಧಾರಿತ ಬೇಸಾಯ ಕ್ರಮಗಳಿಂದ ಭತ್ತ ಬೇಸಾಯದಲ್ಲಿ ಉತ್ತಮ ಇಳುವರಿ ಪಡೆಯಬಹುದಾಗಿದೆ ಎಂದು ತಿಳಿಸಿದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಕೆವಿಕೆಯ ಪ್ರಭಾರ ಮುಖ್ಯಸ್ಥರಾದ ಶ್ರೀಮತಿ ಹೆಚ್.ವಿ. ದಿವ್ಯಾರವರು ಇತ್ತೀಚಿನ ದಿನಗಳಲ್ಲಿ ರೈತರು ಭತ್ತದ ಬೆಳೆಯಲ್ಲಿ ಉತ್ತಮ ಬೆಲೆ ಪಡೆಯುವುದಕ್ಕಾಗಿ ಐಆರ್64 ಭತ್ತದ ತಳಿಯನ್ನು ಆಯ್ಕೆ ಮಾಡುತ್ತಾರೆ. ಆದರೆ, ಐಆರ್64 ಭತ್ತದ ತಳಿಯು ವಿವಿಧ ರೋಗಗಳಿಗೆ ತುತ್ತಾಗಿ ಇಳುವರಿ ಕಡಿಮೆಯಾಗಿ ನಷ್ಟ ಅನುಭವಿಸುತ್ತಿದ್ದಾರೆ. ಆದಕಾರಣ ಐಆರ್64 ತಳಿಗೆ ಪರ್ಯಾಯವಾಗಿ ಹೊಸ ತಳಿಯಾದ ಕೆಎಂಪಿ 225 ತಳಿಯನ್ನು ಪರಿಚಯಿಸಲಾಗುತ್ತಿದ್ದು ರೈತರು ಸದರಿ ತಳಿಯ ಮೂಲಕ ಉತ್ತಮ ಇಳುವರಿ ಪಡೆಯಬೇಕೆಂದು ಕರೆನೀಡಿದರು.

ಕಾರ್ಯಕ್ರಮದ ನಂತರ ರೈತರು ಕ್ಷೇತ್ರ ಭೇಟಿ ಮಾಡಿ ಗೊನೆ ಉದ್ದ, ಕಾಳಿನ ಸಂಖ್ಯೆ, ಗಿಡದ ಉದ್ದ ಐಆರ್ 64 ತಳಿಗಿಂತ ಹೆಚ್ಚಿದ್ದು ಐಆರ್ 64 ತಳಿಗಿಂತ ಉತ್ತಮ ಇಳುವರಿ ನೀಡುವುದಾಗಿ ಅಭಿಪ್ರಾಯಪಟ್ಟರು. ಕಾರ್ಯಕ್ರಮದಲ್ಲಿ ಸುಮಾರು 40ಕ್ಕೂ ಹೆಚ್ಚು ರೈತರು ಭಾಗವಹಿಸಿದರು. ಶ್ರೀ ಅರುಣ್ ಸ್ವಾಗತಿಸಿದರು. ಶ್ರೀ ಎ.ಎಸ್.ಎನ್. ಧನಂಜಯ ಕಾರ್ಯಕ್ರಮ ನಿರೂಪಿಸಿದರು. ಕು. ಅಂಬಿಕ ವಂದಿಸಿದರು.

* * *




ದಿನಾಂಕ 27.12.2021 ರಂದು ನವಣೆ ಡಿಎಚ್‌ಎಫ್‌ಟಿ 109-3 ತಳಿಯ ಕ್ಷೇತ್ರೋತ್ಸವವನ್ನು ಸುತ್ತೂರಿನ ಶ್ರೀ ನಂಜುಂಡನಾಯಕರವರ ಜಮೀನಿನಲ್ಲಿ ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮದಲ್ಲಿ ಕೆವಿಕೆಯ ಗೃಹ ವಿಜ್ಞಾನಿಗಳಾದ ಶ್ರೀಮತಿ ನೇತ್ರಾವತಿ ಎತ್ತಿನಮನಿಯವರು ಮಾತನಾಡಿ ಸಿರಿಧಾನ್ಯಗಳಲ್ಲೊಂದಾದ ನವಣೆಯಲ್ಲಿ ಅಧಿಕ ಪ್ರಮಾಣದ ಪ್ರೋಟಿನ್, ನಾರು ಹಾಗೂ ಇತರ ಸೂಕ್ಷ್ಮ ಪೋಷಕಾಂಶಗಳಿದ್ದು, ಇದರ ಸೇವನೆಯಿಂದ ದೇಹದಲ್ಲಿ ನಿಧಾನವಾಗಿ ಗ್ಲುಕೋಸ್ ಅಂಶ ಬಿಡುಗಡೆಯಾಗುವುದರಿಂದ ಮಧುಮೇಹಿಗಳಿಗೆ ಉತ್ತಮ ಆಹಾರವಾಗಿದೆ, ರೈತರು ತಮ್ಮ ಮನೆ ಬಳಕೆಗಾದರೂ ತಮ್ಮ ಜಮೀನಿನಲ್ಲಿ ಬೆಳೆಯಬೇಕೆಂದು ತಿಳಿಸಿದರು.

